ಮುತ್ತು ಹೊನ್ಸರವೇರಿ ನೃತ್ಯಯೊ
ಸುತ್ತಲೂ ಶೋಭಿಸುವ ಬನಸಿರಿ
ಮುತ್ತನಿಯು ಹೂಪಚ್ಚೆ ಪಲ್ಲವಲತೆಗಳವೆ ನಿತಂದರವೊ

೨೫೯

ಉಳಿಸಿರಲಿ ನೈಸರ್ಗಿಕಾ ಸಿರಿ
ಗಳನು ಹೂಬನದಚ್ಚ ಹಸುರನು
ಮೊಳಗಿಸಿರ್ಕೆ ಆದೆ ಜೀವವ್ರ ಗೆಲುವಿಗು ನಿತ್ಯ ಕಲ್ಪತರು!
ಗಳಿಸುವಾ ಹೊನ್ ಮಣ್ಣಿ ಈ ಧರೆ
ಯುಳಿಹ ಬನಸಿರಿ ಸಮಕೆ ಬಾರದು—
ಉಳಿಸಿರ್ಕೆ ನೈಸರ್ಗಿಕಾ ಸಿರಿ ಆದುವೆ ಭಾಗ್ಯತರು!

೨೬೦

ಜಂತುಗಳು ನೆಲ ಜಲಚರಾದಿ ನಿ
ಶ್ಚಿಂತ್ಯವಹ ಬಾಳ್ ಮುಚ್ಚಿ ಮೆರೆಯಲು
ಅಂತಕನವೊಲು ಮೋಹಿ ಮಾನವ ಕೊಲ್ಲುತಿಹನಿಲ್ಲ
ಎಂತು ಮನೋ ತನ್ನ ಬಾಳ್ವೆಯು
ನಂತು ಸಾಗಿಸೆ ಮುದ್ದು ಮೋಹಕ
ಜಂತುಗಳನು ವಿನಾಶಗೊಳಿಸಲು ಆದುವೆ ಧೂರ್ತತೆಯೊ

೨೬೧

ಜನವ ಸುಲಿಯುವ ದ್ರೋಹ ಬಗೆಯುವ
ಜನವ ವಂಚಿಸಿ ಹಣವ ಕಸಿಯುವ
ಜನವನೀ ಜನ ಕೊಂದು ಕಟ್ಟುವ ಬದುಕುಗಳ ತರವಾ
ಗಣಿಸುತಲಿ ಆದ ಬಗೆಹರಿವುದಂ
ತೆನುತ ಹಗಲಿರುಳಿಲ್ಲ ಚಿಂತಿಸಿ
ದಣಿದಿನಕೊ ಧರೆಯಲ್ಲಿ ಇರುವ ಅಧರ್ಮವನು ನೋಡಿ

೨೬೨

300

ಸೃಷ್ಟಿಯಿದು ಪರಬ್ರಹ್ಮನಾ ಹರಿ
ಶ್ರೇಷ್ಠತೆಯ ಕೃತಿಯೆಂದೆನುತ ನಂ
ತುಷ್ಟಿಗೊಂಡಿಹರೇನು ಕಾಣುತಲಿಹರೊ ಇದರಲ್ಲಿ
ಭ್ರಷ್ಟತೆಯು ಜೀವನದೊಡೆಯು ಆ
ನಿಷ್ಠವಿಹ ಆ ಕೃತ್ಯಗಳು ದೂರ
ದೃಷ್ಟತೆಯು ದುರ್ದೆಸೆಯೊಡೆಯು ದುರವಸ್ಥೆಯು ದುಃಸ್ವಾರ್ಥ

೭೬೩

ಬದುಕಿನಾ ಬುತ್ತಿರೆಯು ಆನಿರಿ
ಎದುರಿಸಿವ ಚೇಳ್ ಹಾವು ಮೊಸಳೆಗ
ಳಿದರ ಗತಿ ಮನಗಳನೆ ಶ್ರೋತ್ರಿಹ ಬಂಧು ಬಳಗವವ್ರ
ವಿಧಿತ ಕರ್ಮದ ಸಖರೊಲವರಿ
ದುರ್ದೆಸೆಯು ದುರ್ಯೋಗಗ ಹೋರುತಲಿ
ದುರ್ಧರದ ದುರಂತದಲಿ ಆದ್ದವರೊ ದರ್ಶೆಯನಾ

೭೬೪

ನೋಡುತ್ತಿಹೆ ದೇಶವು ವಿದೇಶದಿ
ಕೂಡಿಯಿಹ ಜನ ಕೋಲಾಹಲದ
ಬೀಡು ಬಿಗುಡಾದೊಲು ವ್ರ ಸಂಸಾರಗಳಿ ಒಡೆಯುತಿವೆ
ಕೂಡಿಹಾ ಹಿಂಡಂತಗಳು ಒಡ
ನಾಡಿ ಬೇರ್ಪಡುವರದಿ ಜೋಡ್ಯವು
ಹಾಡು ಬೇರೊಂದನಿತು ಶಿಶುಗಳಿಗದಿ ಕುಟುಂಬಗಳೊ

೭೬೫

ಬಂಧುಗಳು ಇಂದಿಹರೆ ಜಗದಲಿ
ತಂದೆ ತಾಯ್ಗಳಿಂದಿಲ್ಲ ಮಕ್ಕಳಿ
ಗಿಂದು ಮೆದ ನಿಸ್ವಾರ್ಥದ ನಿರರ್ಥಕವಾಗಿಹುದು ಬದುಕು
ನೊಂದು ಜೀವ ಸಾಂಪತ್ಯ ಬೇಡ
ಬೆಂದು ದಿಗಿಲಿಸಿಹುದು ವಂಶಗ
ಳಂದವದು ಬಡತೆ ಬೆಂದು ಕಿತ್ತಿರಲೇನು ಸಂಸಾರ?

೭೬೬

ಸೋದರರು ಜಗಮದ್ದ ಹರತೆಗೆ!
ಆದರದ ನುಡಿಯಿಲ್ಲ ಕಷ್ಟಕೆ!
ಭೇದ ಕಲ್ಪಿಸಿ ಭಿನ್ನತೆಗೆ ಸಿಲುಗಾಗಿಸುತಲಿಹರೊ
ಆದಿ ಅಂತ್ಯವು ದೇನು ಅರಿಯದೆ
ಮದ್ಯೆ ಜೂಗುತ್ತಲಿಹೆವಿದೇನೋ!
ಬಾಧೆ ಬಳಲಿಕೆಗೆಡೆ ಬಾಳ್ವೆಯ ಕಳೆಯುವುದೆ ಬದುಕು

೭೬೭

ಕಂಡಿಹರೆ ಕಾಲವನ್ನೆ ಒಡೆಯುವ
ಪುಂಡರಾ ಕಾಲದಲ್ಲಿ ಪುಟ್ಟುತ
ಹಿಂದಿನವರೊ ಕನ್ನೆತ್ತರನೆ ತಾವ್ ಸ್ವಜನ ಬಂಧುಗಳ
ಬಂಡತನದೀ ಬಾಳ್ವೆಯಿದು ಬರಿ
ಬೆಂಡುವಾಗಿರಲೇನಿಹುದು ಆನ್
ಕಂಡೆನಿಲ್ಲವೊ ಒಲವು ನಲವುಗಳನ್ನು ಈ ಭುವದಿ

೨೧೮

ರಾಮ ಕೈಕೆಯರೆಡೆಯು ಮಂಥರೆ
ಭೀಮ ಕೌರವರೆಡೆಯು ಶಕುನಿಯು
ಭೂಮಿಯಲಿ ದಿನದಿನವು ಹುಟ್ಟುತಲಿಹರದೇ ಚೋದ್ಯ
ತಾಮಸದ ಹೃನ್ಮನದಿ ಪಾತಕರು
ಕೂರ್ಮನದೊಲು ತಲೆಮರೆಸಿ ನಿತ್ಯವು
ಸಾಮರಸ್ಯ ಸೌಪ್ರೇಮದಾ ನೆಲೆಯನ್ನೆ ಕಳಚುವರೊ

೨೧೯

ಹುಟ್ಟಿನಲಿ ದೌರ್ಜನ್ಯವನೆ ಜನ
ತೊಟ್ಟು ಬೆಳೆಯಲು ವಿದುವೆ ವಿಸಿವಿಷ
ತೊಟ್ಟಿನೊಲು ಜಿಸುಗುವುದು ಬಾಳ್ದೆರೆಯನ್ನೆ ಕಹಿಗೊಳಿಸಿ
ಕಟ್ಟಿದಾ ಕಾಲಗಟ್ಟಿ ನಂಟನು
ಮೆಟ್ಟಿ ತುಳಿಯುವರವರೊ ತಾವ್ ಮನ
ದೊಟ್ಟು ಮತ್ಸರ ಮೋಹ ಮದ ಲೋಭಗಳ ಬಾಧೆಯಲಿ

೨೨೦

ಚಿಂತೆಗಳು ಷಡ್ವೈರಿಗಳು ಮನ
ದಂತರಾಳವ ಕೊರೆಯುತಿರಲದ
ನೆಂತು ತಾನರಿಯುವನೊ ಮಾನವನೆಂಬುದದೆ ಕೊರಗು
ಅಂತರ್ದರ್ಶನದಲ್ಲಿ ಶಾಂತಿಯು
ಅಂತರ್ದರ್ಶನದಲ್ಲಿ ಮೋಕ್ಷವು
ಅಂತರ್ದರ್ಶನದಲ್ಲಿ ದೈವವು ಇಲ್ಲದಿನ್ನೇನು ?

೨೨೧

ದೂರಕದೊ ಆ ಬೆಟ್ಟತಿಟ್ಟವು
ತೋರುವುದು ನಯಚಿತ್ರದೊಲವೊ
ದಾರಿಗೊಯ್ಯ ಕಾಲ್ಮಡಿಲು ಹೊದರುಗಳನ್ನು ಮರೆಸುತಲಿ
ಬೀರುತಿಹ ನಗು ಹೊಳಪು ಬೆಳಕವು
ಸಾರುತಿಹ ನಯನೋಡಿಯು ಮರೆಸುವು
ದಾರಿಯದಾ ಮಾನವಾ ಮದ ದ್ವೇಷ ದ್ರೋಹಗಳ

೨೨೨

ಇನಿತಿಹ ಜಗದಲ್ಲಿ ಐಕ್ಯವು
ಜನಜನಕೆ ಸಾದರದ ಸೌಖ್ಯವು
ಗುಣ್ಣಮನಕೆ ಪ್ರಾಮುಖ್ಯವಹ ಪರಮಾರ್ಥ ಯೋಗವದು
ಮನನ ಮಾಡದೆ ಮಾನವೀಯತೆ
ಯನನುಸರಿಸದೆ ಕೊಡುತ್ತಿರುವರು
ಮನುಜರೀ ಭುವದಾತ್ಮ ಸಿದ್ಧಿ ಸಮೃದ್ಧಿಯನೆ ನಿಜದೆ
೨೨೩
ಏನು ಮತಗಳುದೇಕೆ ಪಾದವು
ದೇನು ದೇವರು ದಾವ ರೂಪವು ?
ಕಾಣದಿಹ ಕಲ್ಪಿತ ಕಲ್ಪನೆ ಅದುವೆ ಕರ್ಮವದು
ಮಾನವನು ಜಗಜೀವಿ ಸರ್ವರ
ಸಾನ್ನಿಧ್ಯ ದೇವನ ರೂಪವದುಯೆಂ
ದೆನ್ನುತಲಿ ಪೂಜಿಸಲೊ ಪರಿಶುದ್ಧಾತ್ಮ ದೈವವನು
೨೨೪
ಮತವ ಸಾವಿರ ಕಟ್ಟಿ ಮಾನವ
ವೈಷ್ಣವಿಯನು ಬಗೆದಾಗಿಸಲಹನಾ
ವ್ಯಷ್ಟಿಯು ಜೀವಕದೇನೊ ಕಲ್ಪಿತ ಭೇದವನು ಉಕ್ಕಿಸಿ
ಮತವು ಜಾತಿಗಳಿಂದು ಜನಗಳು
ಮತಿಗೆಡುತಲಿ ಮತಾಂಧರಾಗುತೆ
ಹತಿಸುವರೊ ಜನಗಳನೆ ಕಾದುತ ಸಮರವದು ನಿತ್ಯ
೨೨೫
ಹಿಂದು ಮುಸ್ಲಿಮ ಸಿಕ್ಖ ಪಾರ್ಸಿಗ
ಳಿಂದು ಕ್ರೈಸ್ತರಿಹೂದ್ಯ ಬೌದ್ಧರು
ನಿಂದು ಮೆರೆಸಿಹ ಭೇದದೊಡೆಯೆಂ ಭಿನ್ನ ಜಾತಿಗಳು
ವಂದಿಸಾ ಶಿಲ ದ್ವೇಷ ವೈರವ
ಇಂದು ನಾಳೆಯು ಸಾಧಿಪೆರದೆಂ
ದೆಂದಿಗೂ ಇಹ ರುದ್ರ ನಾಟಕವದುವೆ ಮಾನವನ
೨೨೬
ಯುದ್ಧಗಳು ಕಾದಾಟಗಳು ಮತ
ಭೇದದೊಡೆ ಸಹಸ್ರಾರು ಜಾತಿಗ
ಳುದಿತ ಲೋಕವ ಕಾಳಗದ ಕಣವಾಗಿಸಿರಲಂತು
ಬುದ್ಧಿ ಸಿದ್ಧಿಗಳಿಲದ ಮಾನವ
ನುದರಿಸಿಹನೇ ಜಗವ ಶೀಘ್ರ
ಬದ್ಧನಹನೆಂದು ಕೊಲ್ಲಿ ಕೊಲೆಗಳು ಲೀಲೆಗೆಂದೆನುತೆ
೨೨೭

ಹೇಳಿದರು ದೇವಾಸುರರ ಕಥೆ
ಕಾಳಗವ ನಡೆಸಿದಂದರಾ ವ್ಯಥೆ
ಯೆಲ್ಲವನು ಸಾರಿದರು ಮಾನವ ಕಲ್ಪನೆಯು ಬಲದೆ
ಎಲ್ಲಿಹರು ದೇವಾದಿಗಳು ಮ
ತ್ತೆಲ್ಲಿಹರೊ ದಾನವ ಕುಲವು ಬೇ
ರೆಲ್ಲ ಮಾನವ ಮನದ ಕಲ್ಪನೆಯಲ್ಲದಿನ್ನೆಲ್ಲಿ ?

೨೨೮

ಕವಿಯ ಊಹೆಗೆ ಮಿತಿಯು ಇದೆಯೇ ?
ರವಿಯ ದೃಷ್ಟಿಗೇನ್ ಮೇರೆಯಿದೆಯೇ ?
ಹವನದಗ್ನಿಯ ಧೂಮಕಾ ವ್ಯೋಮಾಂಗಣವದಿಲವೆ ?
ಭುವನದಲಿ ಶಿವಹರಿಯ ವಾದವು
ಶ್ರವಣ ಭರಿತ ಅಸಂಖ್ಯ ಕಥೆಗಳು
ಭುವಿಯ ಕಲುಷಿತಗೊಳಿಸುತಿಹುದು ಹೃನ್ಮನದ ಭ್ರಾಂತಿಯೊಳೆ

೨೨೯

ಅಂತರಿಕ್ಷದಿ ಸಂಚರಿಸಿಯೇ
ನಂತೆ ಲೋಕದ ಜೀವಿಗಳು ಚಿರ
ಚಿಂತೆಯೆಲ್ಲವನಳಿಸಲಾಹುದೆ ಹೇಳು ಹೋಗಲೆಯಾ ?
ಅಂತಕನ ಹುಟ್ಟಾರಿ ಇಲ್ಲಿರ
ಲಂತರೀತಕೆ ವಿದ್ಯುತ್ ಬಲವ
ನ್ನಾಂತ ಸಿಡಿಲಾಸ್ತ್ರಗಳು ಲೋಕದಿ ಏಕೆ ತುಂಬಿಹರೊ ?

೨೩೦

ಚಿತ್ರದಲಿ ಸಮಬುದ್ಧಿಯಿಹರಾರ್ ?
ಮಿತ್ರತತ್ವವನು ಜಯಿಸಿದವರಾರು ? ಧ
ರಿತ್ರಿಯಲಿ ಸದ್ವರ್ತನ್ಯಾಯದಿ ಜೀವಿಸಿದವರಿಹರೆ ?
ಸತತ ತತ್ವಯಿಹ ಪರಮಾತ್ಮನಂಶವ
ಚಿತ್ತದೂ ಕಾಣದೆಯೆ ಅರಿಯದೆ
ಮತ್ತರಾಗಿಹರಲೊ ಮಾನವನೀನು ಮಾಯೆಯಿಂದು ?

೨೩೧

ಮಿಂಚು ವೇಗದ ಪಯಣದೊಳೆ ಬಾ
ನಂಚಿನಲಿ ಸಾಗರದ ತಳದಲಿ
ಸಂಚರಿಸಿಯೂ ಅಪಾರ ವಿಶ್ವವಿದೆಷ್ಟು ವ್ಯಾಪಕವು
ಹೊಂಚುತಿದೆ ನೀರೇಜನಾಭನ
ಚಂಚಲತೆಯಾ ಸೃಷ್ಟಿಯಿದು ಕೇ
ಳಿಂಚು ಶಕ್ತಿಯು ವಿದ್ಯುದ್ಧಾರೆಯಲಿ ತೇಲುವುದೆ ಭವ್ಯ

೨೩೨

ಕಿನ್ನರರು ಯಕ್ಷ ಕಿನ್ನರಿಯರೂ
ಕನ್ಯೆಯರು ಊರ್ವಶಿಯು ರಂಭೆಯು
ಮೇನಕೆಯರಾ ಬೀಡು ಯಾವುದು ಯಾವ ಲೋಕವದು?
ಪತ್ನಿ ಶಚಿ ದೇವೇಂದ್ರರಾ ನೆಲೆ
ಗಣ್ಯ ಸಿರಿ ಕೌಬೇರಿ ಧನಪತಿ
ಮಾನ್ಯ ಮುನಿ ಬೃಹಸ್ಪತಿಯು ರಾಜ್ಯವದಾವ ಲೋಕವದು?
೭೮೩

ಲೋಕಗಳು ಶತಕೋಟಿಯಿಲ್ಲಿಹವು
ದಾಕರವು ಅವು ಅವುದಕೆಯೋನ್
ಏಕೆನುತಲರಿತರಾರ್- ತಾರಾಪಥವೊ ವಿಸ್ಮರಥಾ
ನಾಕನರಕಗಳೆಲ್ಲಿಹವೊ ಏನ್
ಜೋಕಲಾಡುತಲಿರುವ ಸುಂದರ
ಲೋಕದಲಿಯಿಹ ಜೀವರಾಶಿಗಳಲ್ಲಿಹವೆ ಏನಾ?
೭೮೪

ಪ್ರಾಣಿ ಪಕ್ಷಿಯಿಂದೊಡಗಿ ಶರಧಿಯ
ಮೀನರಾಶಿ ತಿಮಿಂಗಿಲಾದಿಯು
ಆನೆ ಸಿಂಹಗಳಿಂದು ಸಾವಿರ ಚೆಲುವು ಜಂತುಗಳು
ಏನು ಸುಂದರ ರೂಪು ವಿವಿಧತೆ
ಏನು ಬಂಧುರ ಭಾಗ್ಯ ಬಣ್ಣೆಯು
ಕಾಣೆಸಿರೆ ಇಂತಿಲ್ಲಿ ಪರಲೋಕಗಳು ಇಂತಿಹವೆಯೆ?
೭೮೫

ಹೊಂದಿಹವೆಯೆ ಚೆಲುವವನ್ನು ಗ್ರಹಗಳು
ಚಂದ್ರ ಸೂರ್ಯರು ತಾರೆಗಳು ಆರ
ವಿಂದನಾಥನ ಸೃಷ್ಟಿ ಆವು ಭೂರಮೆಯ ಚೆಲು ಇಹವೆ?
ಸುಂದರವೊ ಮಲೆ ಹಕ್ಕಿ ಕಳ್ಳಿಬಳ್ಳಿ
ಹಂದರದೆ ರಾಜಿಸುವ ಧರಣಿಯ
ಅಂದವನು ಮೀರುವುದೆ ಬರಿದಿಹ ನಭೋಲೋಕಗಳೆ
೭೮೬

ಇನಿತಿಹಾ ಚೆಲು ತಳಿರು ಹಾಸಿನ
ಮಣ್ಣಿನ್ನು ಹೊನ್ ಸಿರಿ ವಜ್ರತೇಜದ
ತನಿಗಡಲ ತೆರೆ ಸಿಪ್ಪುಸಾಗರವಾಂತ ಭೂಮಿಯಿದಾ
ಮನುಜನತಿ ಮತಿಗೆಡುತ ತಾನಾ
ಧ್ವನಿಕ ಸಶಿಲಾಸ್ತ್ರಗಳ ಮತ್ತಲಿ
ಕೊನೆಯ ಜಗವ ವಿನಾಶಗೊಳಿಸಲದೇನಿಹುದೊ ಜೀವಾ
೭೮೭

ಜೀವದೆರೆಯಿದು ಪರಿಯೆ ಇಹದಲಿ
ಜೀವಿಗಳಿ ಜಗಕೊಲಿದ ಆಸ್ತಿಯು
ನೋವು ಬೇವುಗಳನ್ನು ಸಹಿಸುತ ಬಾಳುತಿಹುವಂತೆ
ಸಾವು ಅವನಿಯೊಳಿರುತ ಬದುಕುವ
ಜೀವಿಗಳು ನಭ ವನ್ಯ ಜಲಚರ
ಭಾವಿಗಳು ಮಾನವನ ಹೃನ್ಮನದೊಲವ ಮೀರುವುವು
೨೮೮

ಉಕ್ಕುತಿಹ ಪದೋರ್ಕೆಯ ವೇಗದಿ
ಉಕ್ಕಿ ಬಲ ವಿದ್ಯುತ್ತು ವಾಹವ
ನಿಕ್ಕಿಸಿದ ಮಾನವನೆ ಮಾನ್ಯನು ವಿದ್ವತ್ತೋಷಿತನು
ಪಕ್ಷಿಗಳನತ್ತಿತ್ತ ಕಾಣುತ
ಹಕ್ಕಿಗಳು ಆಗಸದಿ ಹಾರುತ
ಲೆಕ್ಕವಿರಲವು ಹಾಡುವುವೊ ಮಲೆನಾಡ ಗಾಯಕರು
೨೮೯

ಅಳಿಲು ಆನೆಯು ಆರ್ನ ಚಿಗರಿಗ
ಕೊಳುವುದೊ ನೋಡಾ ಜೀನ್ನಾವು ಜೀವನವು
ಇಳೆಯ ಸರ್ವ ಜಂತು ಜಾಲವುದೇನು ಸೊಗವಹುದೊ
ಉಳಿಸಿರ್ದ ಚೆಲು ಗೆಲುವಿನಾ ನಲ
ಒಲವಿನಾ ಬದುಕಿರಿಯು ಜೀವಿಯು
ನಳಿಸಿರ್ದ ನೈಸರ್ಗಿಕಾ ವರ ಸಂಪದ್ಭರಿತವವೊ
೨೯೦

ಬೀಸುಗರಿಯು ಸುನೀಲ ಸುಂದರ
ಹಾಸುದೆರೆಯಾ ಬೆಟ್ಟನೊಡೆಗೆಲು
ಸೂಸುತಿಹ ಚೆಲು ಕೇಕೆ ಪಾತರಗಿತ್ತಿಗಳು ಗಿಳಿಯು
ಸುಸ್ವನದಿ ಉಲಿದೊಲಿವ ಕೋಗಿಲೆ
ಸಸ್ಯ ವಿನ್ಯಾಸ ಜೀವಿ ಸಾರಿವ
ಗಾತ್ರಯೆಷ್ಟೊ ಬನಸಿರಿಯೊಳೀಸುವ ಪಕ್ಷಿ ಸಂಕುಲವು
೨೯೧

ಕೋಟಿ ತೊರೆಯಲಿ ಸಾಗರದ ಮಡು
ಮಲ್ಲಿ ನೀಗೊಳ್ಳುದಾ ಸರೋವರ
ದಲ್ಲಿ ಮೀನ್ಗಳು ಬಳುಬಳುಸಿಯೊಕ್ಕುಳಿಯುವಾಡುವುವು
ಸಲ್ಲಲಿತವಾ ಸಿಹಿ ಶರಧಿಗ
ಳಾಳದಲಿ ಮರಿಮೀನ್ ತಿಮಿಂಗಿಲ
ಕಾಲವು ಜಲಚರಾದಿ ಸತ್ಯಮುದ್ದಗಲ ರಮಿಸುವುವು
೨೯೨

ಹಣ್ಣುಗಳು ಬಲು ಬೀಜಗಳನಾ
ಮಣ್ಣಿನಲಿ ಹುಗಿದಾಗ ಮೊಳಕೆಯು
ಕಣ್ಣು ತೆರೆದು ಕೊನರಾಗಿ ಮೊಳೆಯುತ ನಿಸರ್ಗದಿ ಜನನವಪ್ಪೊ
ಹಣ್ಣು ಬಲಿತೊಡೆ ಬೀಜ ಮೊಳೆವುದು
ಮಾನವನ ಮೃಣ್ಮಯತೆಯಾ ಮೈ
ಮಣ್ಣುವಾದೊಡದಾತ್ಮ ಜೀವಾತ್ಮನಿಂದು ದಿಗಂತವುದು

೭೯೩

ಬೀಜವದು ಚೆಲುವಿದೋರ್ಡಾ ಚಿಗುರಿ
ರಾಜಿಪುದು ಫಲ ಪುಷ್ಪಗೊಳ್ಳುತ
ಬೀಜದಲಿ ಬೆಳೆಕಳೆಯು ಸಾರ ಸಮೃದ್ಧಿಯುಂದು ನಿಜವೈ
ಬೀಜ ಸಮನಿಹ ಜೀವದಾತ್ಮವು
ಆರ್ಜಿಸಿದೊಡಾ ಪುಣ್ಯವನು ಕೇಳ್
ಪೂಜ್ಯವೆನಿಪುದು ಜನ್ಮದ ಪೋಷಿತನನ್ನು ಪಡೆದಿಂದದೊ

೭೯೪

ಜೀವವದು ಜನಮಾತ್ರಕಲ್ಲವೊ
ಜೀವದಿರೆ ಈ ಭೂಮಿ ಸಾಗರ
ಪಾವನವೊ ವಿಶ್ವದ ಚರಾಚರ ಜೀವದೊಡಗೊಂಡು
ಠಾವ ಭೂರಮೆ ವಾಯು ಅಗ್ನಿಯು
ಭವ್ಯ ಖಗಮೃಗ ಕ್ರಿಮಿಕೀಟಾದಿಯು
ದಿವ್ಯ ತರುಲತೆ ಕಳೆಬೆಳೆಯು ಜೀವಿಗಳಾ ಸೃಷ್ಟಿಯಲಿ

೭೯೫

ಕಾಳು ಬೇಳೆಯು ಬೀಜವಾ ಮಣ್
ಮೂಲ ಮೊಳಕೆಯುದಾಗಿ ಚಿಗುರೆಲೆ
ಬಳ್ಳಿ ತರು ಹೂವಳಿರು ಕೊನರೆಲೆ ಹಣ್ಫಲವು ಎನುತ
ತಾಳುತಲೆ ವೈವಿಧ್ಯವನು ಪೊ
ತ್ರೀಳು ಜನ್ಮವನಂತವದು ಮರು
ತಾಳೆಪುದು ಇದೆ ಬೀಜವದೆ ವೃಕ್ಷವದೆ ಹುಟ್ಟು-ಸಾವು!

೭೯೬

ನೀರಿಗಿಹುದಾ ಜನ್ಮಗಳು ಸಲ
ವಾರು ಕೇಳ್ ಬೆಂಗದಿರಿಗದು ಮೇ
ಲೇರಲಾವಿಯು ಗಗನದೆತ್ತರದಲದೆ ಕಾರ್ಮುಗಿಲು
ಭಾರವದ ಸಹಿಸದೆಯೆ ಬೀಳುವ
ವಾರಿದೆರಿಯುದು ಮಳೆಯು ವರ್ಷಾ
ಧಾರೆಯುದು ಭೂಸಾಗರಗಳನೆ ತುಂಬುತುಳುಕಿಪುದು

೭೯೭

ಉದಿಸುವಾ ರವಿ ಬೆಳಗುವಾ ಶಶಿ
ಮುದದಿ ಮಿನುಗುವ ತಾರೆಗಳು ಜಗ
ಕೊಡಗಿಸುತ್ತಲಿದೆ ನಿತ್ಯ ಋತು ಗತಿಮಾನ ಕಾಲಗಳು
ವಿಧಿಬಲದ ತಿದಿಯೊತ್ತುತಿರೆ ಬೆಂ
ಗದಿರನಾ ಪ್ರಭೆ ಗ್ರಹಗಳವು ತಿಂ
ಗದಿರು ತಂಪವದೆಲ್ಲ ಜೀವಿಗಳನ್ನು ಪೋಷಿಸುವವು
೨೯೮

ಎಷ್ಟು ಸುಂದರವೀ ವಸುಂಧರೆ
ಎಷ್ಟು ಬಂಧುರ ಜೀವದೆರೆಡೆ
ಸೃಷ್ಟಿಯೆನೆ ಪರಿಪುಷ್ಟಿಯಾಗಿಸಲದುವೆ ಸಂತುಷ್ಟ
ವೃಷ್ಟಿಯೊಡೆ ಜಲ ಸಸ್ಯ ವಾಯುವು
ದೃಷ್ಟಿ ಪೋಷಿಕೆ ಜೀವದಾಯಕ
ದಷ್ಟಿ ಸೃಷ್ಟನ ಕಾಯಕವು ಸಂರಕ್ಷಣವು ನಿಜದಿ
೨೯೯

ಮಾನವಾ ನೀನ್ ಉಳಿಸು ಸೃಷ್ಟಿಯ
ಮಾನ ಮಾಪಿನ್ನಕೆ ವದುವು ಸಾತ್ವಿಕ
ವನ್ಯ ಜಲಜೀವಿಗಳು ಕುಲವನು ಉಳಿಸಿಲ್ಲಿ ಮನುಜಾ
ದಾನವನಪೊಲು ದಹಿಸುವದನಾ
ಹಾನಿಸದೆಯಿರ್ಪೊ ವಿಶ್ವದಿಹ ವಿಲ
ಗನ್ಯಾರಿತೋರಿಕೆಗಳಲ್ಲಿ ಭೂರಮೆ ಇರುವ ಭಾಗ್ಯರಮೆ!
೩೦೦

(ಎಂಟನೇ ಶತಕವು ಸಂಪೂರ್ಣವು)

ಓಂ ಭುವನೇ ಶ್ರುತಿಸ್ತವ

ಶ್ರೀ ಭುವನಪತಿ ಜಗನ್ಮಾತೆಯೆ
ಹ್ರೀಂ ಭುವನೇಶ್ವರಿ ಲಲಿತಾಂಬೆಯೆ
ಸುಭಾಗ್ಯದಾಯಿನಿಯೆ ಸುಯೋಗಿನಿಯೆ ಜಗದ್ರಾಜೇಶ್ವರಿಯೆ
ಶುಭಾಶುಭ ಸಾಗರಿ ಪರ ಶಿವೆ
ನಾಭಿನ ಸುಜಿತೆ ಭುವನಿತೆ ಸ
ವಾಗ್ಭವಸ್ಥಿತೆಯೆ ಅನಿಂದ್ಯ ಸುಂದರ ಪ್ರಕೃತಿಯೆ ವಂದೇ
॥೧॥

ಕಾವ್ಯವಿದು ಹರಿಯುತಿದೆ ಸಿರಿ ಸು
ಶ್ರಾವ್ಯವೀ ಸುಪದರಿಯು ಹನಿಯಾದು
ನವ್ಯ ನವರಸ ನಾದ ನಿಮ್ಮರಸಿ ವಾಗಿ ಉಕ್ಕುತಿದು
ದಿವ್ಯತೆಯು ದೀಕ್ಷಿತಸು ಭಾವವು
ಭವ್ಯತರ ಭಾವಾರ್ಥ ಸಿಂಧು
ಶ್ರಾವ್ಯ ಗೀತಾಮೃತ ಕೃತಿ ಸುಂದರವಾಗಿ ಸ್ಪಂದಿಸುವುದು
॥೨॥

ಮನು ಜಗದಲಿ ಮನ್ವಂತರಗಳನು
ಜನ ಮನೋಗತ ಪ್ರಗತಿ ಹಾದಿಯನು
ದಿನ ದಿನವು ಯುಗ ಯುಗವು ದಾಟುತ್ತ ತಲುಪುತಿದೆ ಇಲ್ಲಿ
ಎಣಿಸಿದೆಯೆ ಕಾಲಕೋಟಿ ನಿನ್ನಿಗ
ಕ್ಷಣಿಕ ಕಾಲದಿ ರಚಿಸಿದ್ದು ಬರುವಾವ
ದಿನಗಳವು ನಾಳೆಗಳು ಹಲ ಯುಗಮಾನಗಳಿಂತು
॥೩॥

ಲೋಕವಿದು ಕಿರಿದಾಗುತಿದೆ ನಿಜ
ನಾಕ ನಿನಗಿಂ ವಿಷಯಗಳು ಹಲ
ತಾಕಲಾಡಿಸುತ್ತಿ ಹೊಡದು ದಿನದಿನವೇನ ಹೇಳಲಿ ನೀ?
ಲೋಕದ ಪ್ರಸ್ನ ನೂಕಾಯು ಕಾಲದಿ
ಕೀರ್ತಿ ಲೋಕದ ಗೊಡವೆಯೆ ನನ್ನದೆ
ಶೋಕಿಸಿದೊಡೆಯುದು ಏನು ಬಾಳ್ವೆ ಅದೇನು ಬದುಕದುವೋ
॥೪॥

ಚೆಲುವ ನಿಸರ್ಗದೆಯೆ ಅಸ್ವರತಿಯು
ಕಲೆಯು ಲಹರಿಯ ವಿಸ್ಮಯದಾಟ
ಅಲುಗದ ಮೇರು ಗಿರಿ ಉರುಳ್ವ ವೃಕ್ಷ ಭುವಿ ಹರಿವ ನದಿ ಮುಗಿಲು
ನೆಲವು ಜಲ ನಭ ಅಗ್ನಿ ವಾಯುವು
ಬೆಳಗುವಾ ರವಿ ತಾರೆ ಶಶಿ ಗ್ರಹ
ಗಳಿಹುದು ವಿತಾನದಲಿ ಇರಿತಿ ಏನೆಂದು ಆನ್ನುವಿರಿ?
॥೫॥

ಭೂಮಿಯಿಂದು ನಡೆಲಾ ಕ್ರತಿ ಕೆಡಿಸಿ ನಿ
ನಾಶವ ಮಾಡೋಣೆಯೆಂದು ರಸಾಯನ
ಬುದ್ಧಿ ಕಲ್ಪಿತ ಸೃಷ್ಟಿಗಳನು ವೃಷ್ಟಿಯೆಂಬಂತೆ
ಕವರ್ಷಿಲ ಸಂಹಾರ ಬಲ ದು
ಸ್ವಾರ್ಥ ಮರ್ಮ ಬುದ್ಧಿಯನ್ನು ನಶಿಸಲು
ದೊಡ್ಡ ಗುಡಿ ನಡೆದವ ಲೋಕರಿಯನನು ಬಳಸುವಂತೆ
೧೦೬

ಬಿನ್ನಯ ಮರ ಲೋಕಿಯಿದು ಮನ
ಮನ್ನ ಶ್ರೀನ ಬಲ ಬಲದ ಬರುಕೇದು
ಪ್ರಸನ್ನದ ಮಮತೆಗಳ ಮೋಹದ ರಮ್ಯದೆರೆ ಇರುವೊ
ಉನ್ನತಿಯಲಿ ಮತ್ತರಾಗಲು
ಕನ್ನನವ ನಿಮುದಿ ಅತ್ತು ಸಾಗುತ
ಜನ್ನ ಜನಾಂತರಗಳ ಹಿರಿಗೂ ಹರಿಯುವುದು ಜನ್ನ
೧೦೭

ಸೂರ್ಯನ ಕಾಲಚಕ್ರ ಇಂದು ನಿಂತಿತೇ?
ಆರ್ಯನ ಕಾಲಚಕ್ರ ಬೆಳಗುವಿಹರೇ?
ಶೌರ್ಯದಾ ಬಲ ವೀರ ಧೀಮಂತರು ಜಗದಿ ಇಹರೆ?
ವೀರ್ಯ ಮಂದರ ಧೀನತೆ ಹೀಗಿತ್ತೆ!
ದೈವ್ಯ ಸ್ವಾರ್ಥ ಮದನನ್ನು ಮರೆಸಿತ್ತೆ!
ಕಾರ್ಯಲೋಕದ ದೈವ ಶಕ್ತಿ ಪ್ರವೃತ್ತಿಯನು ತೋರಿತ್ತೆ!
೧೦೮

ಮರ್ಮ ಸಂಕರವಾಗಿ ನತತ ಕೇಳು
ಕರ್ಮ ಕರಟು ಬಿಟ್ಟು ದಿಕ್ಕರಿಸು
ಮನ್ನ ನಿತ್ಯ ನಿಮಿಷ ನತತ ಅಹರಂತು ಜನವಿಲ್ಲ
ಚಿನ್ನವ ಸಿಂಗಳ ನೀತಿಗ
ಕಿನ್ನ ಕಡೆಗಣಿಸುತ್ತ ದಿನದಿನ
ಮಾನವನು ಮರತು ಹಿಂತ ಜೀವಿಯೊಳಗಿಹನು ನಿಜದಿ
೧೦೯

ಮಾನವನು ತಾನ್ ಡೋಲು ಧೈಮರುಗ
ಹಿನ್ನ ಬಾರಿಸಿ ತಾನೆ ಕ್ರೀಡಿಸು
ತಾನೆ ಹೀರಿಸು ತಾನೆಯೇ ದೇವಾಂಶನೆಂದೆನುತ
ಮನ್ನ ಮೃಗ ನಭ ಜಲಚರಾದಿಗ
ಹಿನ್ನ ಸೃಷ್ಟಿಯ ಜೀವಿ ಸತ್ವವ
ತನ್ನ ಪೊಲುಮೆಯಿಂದ ಕೊನೆಯೆ ನಿನಾಶಗೊಳಿಸುವನು
೧೧೦

ಕಥೆಗಳಿಗೆ ಕೊನೆಯುಂಟು ಇಲ್ಲವೊ
ವ್ಯಕ್ತಿಯು ರಚಿಸಿರುವ ನಾಟಕದ ಬಗೆ
ಉಕ್ತಿಯ ಚಿಂತನೆಯು ಭಕ್ತಿಭಾವದಲ್ಲಿ ತೋಯ್ದು ಹಾಸಿಗತಿಯು
ಕಥೆಯ ಕೆರಳಿಕೆ ಶೃಂಗಾರವನು ಸೀ
ಬಿತ್ತಿ ಕಾವ್ಯಾದಿಗಳು ರಸವನು
ಹೊತ್ತು ಉತ್ಪತ್ತಿಯಾದುದು ಜೀವನ ನಾಟ್ಯರಸದರಿಯು
೮೧೧
ಉರುಳುತಿಹ ಧಾರಿಣಿಯು ಈ ಭುವಿ
ದೇಶಿಯ ದೇಶಿಗಳಿಗೆ ಬರುವುದೇ ಹಲ
ತರದ ಜೀವಿಗಳಿರುವಿಕೆ ಮಾನವಗಣವು ಕೋಟ್ಯಾದಿ
ಇರುವುದೇ ನಕ್ಷತ್ರ ಲೋಕದ
ಆರುವುವೇ ಸೂರ ಸಂದಶಾವಹ
ಹರಿಹರಿಯು ನಿಸ್ವಾರ್ಥ ಜೀವಿಗಳಿಹದಿ ಇರುವವೊಲು?
೮೧೨
ವಿಶ್ವಕವಿತ್ವನ ಚಿತ್ರವೇನಿತ್ತಹೆ?
ವಿಶ್ವವಿದಿತವೆ ವಿಶಿಷ್ಟ ಚಿತ್ರವು
ಶಾಶ್ವತವು ಜೀವಂತ ನಿರಂತರ ಭೂಮಿಯ ಮೇಲಿನಗಳು
ಅನ್ವೇಷಿತ ಮೈವೆತ್ತಿರಲು ಮನು
ದೈವತ್ವಯುತದ ಪ್ರಾಬಲ್ಯಕೊಡದ
ವಿಶ್ವ ಮೋಹಕ ಶ್ರೇಷ್ಠ ಇದ ನಿಮದಾಗಲು ಹೊಂದಿದೆಯೆ?
೮೧೩
ಅಣು ಸಮಾನದ ಭಾಗ್ಯವು ಇದು
ಕಣ್ಣೆಸೆಯುತಿದೆ ವೈವಿಧ್ಯತೆಯು ಜೀ
ವನವ ನೆಲ ನಭ ಜಲ ಚರಾದಿಗಳಿಂದ ನಿರಂತರವೊ
ಎಣಿಸುತಿರುವ ಕೋಟಿ ಲೋಕಗಳ
ಕೆಣಿಸುತ ಜೀವನ ಜನ್ಮಗಳ ಮನ
ಬನವು ಹಸುರಾಗಿದ್ದರೆ ಹೊಲ ಹೊತ್ತಿಹಮೆಯೇನು?
೮೧೪
ಧರಣಿಯೊಳು ಇಹ ವಿದ್ಯುದ್ವೇಗವ
ತ್ವರಿತ ಗತಿಯಾ ಪಯಣದಂದವ
ತರತರದ ವೈಜ್ಞಾನಿಕ ಜಗತ್ಕ್ರಾಂತಿ ಸಾಧನೆಯು
ಸ್ಫುರಿಸಿ ನಡೆಸುವ ತಾಂತ್ರಿಕತೆ
ವರ ನಭಾಗ್ನಿಯು ವಾಯು ನೆಲ ನೀ
ರಿರಿಯು ಶಕ್ತಿಯು ಹೊತ್ತಿಹವೆ ಹಲಕೋಟಿ ಲೋಕಗಳು?
೮೧೫

ಎನಿಪವೆಯೊ ಕಲ್ಪರಳುತ ಸಾಗಿಯೆ?
ತಣ್ಣನಿಹ ಶಶಿ ಬಿಂಗದಿರ ನೆಲ
ದಿನನ ಇವೆಯೊ ಅಸಂಖ್ಯ ತಾರಾ ಲೋಕಗಳಲಿಲ್ಲ?
ಬಾನು ಭೂತಲದೆಡೆಯ ಜಗತ
ದಿನನ ನಿತಂದಿರ ನಿತ್ಯ ಪಥನ
ಎಣಿಸ ನಿಮಲರನಿಪವತಿಪಯೆ ನಿಹಸಿರುವ ಲೋಕಗಳು?
೮೧೬
ಮತ್ತೊಮ್ಮೆ ಮರಕಲ್ ಲೋಹ ತೈಲವ
ಚಿನ್ನ ವಜ್ರ ವೈಡೂರ್ಯಗಳ ರಜತವ
ರನ್ನವನ್ನೆ ನೀಲ್ ಕಾಳ್ ಬಿಳಿಯ ಫಲ ಪಕ್ಷಿ ಬೆಳ್ಹೊಲವ
ಚಿನ್ನತೆಯ ಚಿನ್ನಾದೊಡೆ ಅತಿ
ಉನ್ನತೋನ್ನತ ಸಾಧಕರ ನೆಲೆ
ಜ್ಞಾನಿ ಯೋಗಿಗಳಿಹರೆ ಪಲತರ ಲೋಕಗಳಲಂತೆ?
೮೧೭
ಓಡುತಿಹ ಮುಗಿಲಮತಿ ಬಾನಲಿ
ಓಡುತಲಿ ಕಡಿಗಂತ ಭೂಮಿಯ
ನೋಡಿ ಧಾರಾಕಾರದಲಿ ಘುರುಘುರನೆ ಬೀಳುತಿರೆ
ತೋಡುತ ತೊರೆಗಳನತ್ಕ್ಷಣದಲಾ
ಕಾಡುತ ಗತ್ತುಗಳನ್ನು ತೋಯಿಸುತ
ಕಾಡುವಿಪವ ತೊಲ್ಗಿಸಲು ಅವ ಗ್ರಹಲೋಕಗಳಲಿವೆಯೆ?
೮೧೮
ನೆಲದಲರಳುವ ಮಿಂಚುವೇಗದ
ಹಲತರದ ವಿದ್ಯುತ್ತು ವಾಹನ
ಗಳುವೊ ಬನಿಸ್ತವ ಕಾರುಗಳು ಸಾಗರದ ಜಹಜುಗಳು
ಕಲಿಯುಗದ ಕಲಿತನದಿ ಜಗವರು
ಹಲವು ಸಾವಿರ ಜನವ ನಿತ್ಯವು—
ಹೊಳೆದ್ಯೊಳಿಪ ಯುಗದೇರುಗಳು ಹರಲೋಕಗಳಲಿವೆಯೆ?
೮೧೯
ಅಂತರಿಕ್ಷ ಪ್ರಯಾಣ ವಾಹನ
ದಂತದರ್ಶನವದೆ ವಿಮಾನವ
ದಂತರಾಳದಲಿರುತಿಹ ವಿಜ್ಞಾನ ಕ್ರಾಂತಿಯಿದ್ದೆ
ಇಂತು ಇಹ ಜಗ ನಭೋಲೋಕಗ
ಳಿಂತು ಇಹದೆಂದೆನುತ ಪೊಂಚಲ
ದಂತ ಕಾರ್ಯೊ ಇಳೆಯ ಚಲುವಿವದಾವ ಲೋಕದಲಿ
೮೨೦

ಕಿನ್ನರಾಪ್ಸರ ಲೋಕವೆಂತಿಹುದೊ ?
ದಿವ್ಯರಹ ದೇವತೆಗಳೆಲ್ಲಿಹರು
ರಿನ್ನು ಇಂದ್ರ ಕುಬೇರರಾ ಕಾಲವೆಲ್ಲಿಹರೊ ತೋರಿಸ್ತಾ
ಮಾನವನು ಭೂಗಿಲಿನುತ ಬೇಡಿಸ
ಹನೊ ನಿರಾಮಯು ಸಿದ್ಧಿಲೋಕಗ
ಳಿನ್ನು ಬಳಸಿಯು ಕಾಣದಿಹನಾ ಜೀವಿಗಳನಲ್ಲಿ
ಲ-೨೧
ಮನನ ಜಕಲವಿದ ಮೋಕ್ಷವಹುದ್ದೆ
ಜನಿಸಿದರು ಸುರ ದಾನವರ ಯಕ್ಷರು
ಮುನಿವರರು ಸಿದ್ಧರ್ಷಿ ಜೀವಾದಿಗಳು ಮನದಲ್ಲಿ
ಕನಸಿನಲು ಕಾಣದಿಯು ಇರುವನು
ಮನಸಿನಲಿ ಕಣ್ಣಾರುಳ್ಳೊಡೆಯು ಸರಿ
ಯುಗಸಿ ಹಾಡಿದ ಯೋಗಿವರ್ಯರೆ ದೈವ್ಯರವರಿಹರೆ
ಲ-೨೨
ರಾತ್ರಿಗಳನು ವಿಚ್ಛಿದಿಸುತ ಜಗ
ದನುಭವದ ವಿರಮಾಣ ಶಾಸ್ತ್ರವ
ನನಿಲವಾ ಜಲ ಅನಲ ಶಕ್ತಿಯಿಂದಿಹವ ದಹಿಸುತಿಹ
ರವಿಕಾರ್ಯಾನಿಯದಿ ಜ್ವಲನ ಮಾರ್ಗ
ಘನಗಬೀರವೊ ಘೋರ ನಾಶಕೆ
ಅನುವಿಹುದೆ ನಿರ್ಮಿಸಿದ ವಿಜ್ಞಾನಿಗಳೆ ಗಣ್ಯರವೊ
ಲ-೨೩
ಮನುಸಂದರ ದರಾವಂಡಲ
ವೇನು ಸುಮಶರವೇನು ಗದ್ದಲ
ಮಾನ ಜ್ಞಾನವ ಪೊತ್ತ ಜೀವಿಗಳಿದುವೆ ಪಾವನವೊ
ಗಾನ ನರ್ತನ ಕಲಾ ಸಂಪದ
ಬಾನು ನೀರಲಿ ವಿದ್ಯುತ್ಸಂಪದ
ಮೇನು ಸುಖಕರ ಪ್ರೇಮಸಾಗರ ವ್ಯಾಪ್ತ ಭೂದೇವಿಯೊ
ಲ-೨೪
ಭೂಮಿಯನು ಸಂಹಾರದಾ ಪರಿ
ವ್ಯೋಮದಲಿ ಜೂಗಾಡುತಿಹ ಕಲಿ
ವಾಮನರು ಹನುಮಂತ ವಾಲಿ ಜಟಾಯುಗಳು ಇಹರೊ
ನೇಮ ನಿಷ್ಠೆಯ ಸಾಧನೆಗಳಲಿ
ಸಾಮರಸ ಸಂಶೋಧನೆಗಳಲಿ
ಭೂಮಿ ಜೀವಿಯು ಮೀರಿಹನು ಪರಲೋಕವಿಹರನ್ನು
ಲ-೨೫

ಸಾರಿಹನು ಧರೆಗಂದು ಮಾತಲಿ
ಹಾರಿಹರು ಹೃತ್ಪೂರ್ವದ ತೇರಲಿ
ಘೋರ ದುಷ್ಕರ ದೇವಜರು ಹೊಂದೇರಿನಲಿ ನಭದಿ
ಭಾರತದ ಧ್ವಜ ಹೊತ್ತು ಮಾ ಕಲಿ
ವೀರರಾ ಕಲ ಸಾಗರಾಂತಾ
ಧಾರಿಣಿಯು ಸುತ್ತೆಲ್ಲ ಬಳಸಿದರಂದು ದ್ವಾಪರದಿ
ಲ-೧೬
ಕಾಲಗತ್ತಲೆ ಮಾಧ್ಯತೆಯ ಬಲೆ
ಯಲ್ಲಿ ತೊಳಲಿದ ಯುಗವದಾಗಿರೆ
ಶೀಲ ಸಿದ್ಧಿಗಳನ್ನು ಪಡೆಯುವ ಮೂಕಜೀವಿಗಳು
ಬಾಳುವೆಗೆ ಶರಣಾಗಿ ನರಭೂ
ಗೋಲವಿದನಳಿಯುತ್ತ ಎಡೆಹುತ
ಬೀಳುತೇಳುತ ಕಟ್ಟಿದರೊ ಬದುಕನ್ನು ಲೋಕದಲಿ
ಲ-೧೭
ಇಹುವೆ ಈ ಪರಿ ವೈವಿಧ್ಯದ ಜಗ
ವಿಹುವೆ ವಿಸ್ಮಯದಗಾದ ವೈಯ್ಯಾಲಿ
ಸಹಸ್ರ ಕೋಟಿ ಲೋಕಗಳಲಿ ಇಹುವೆ ಜೀವಿಗಳು?
ಗ್ರಹವು ರಶ್ಮಿ ತಾರಾದಿ ಲೋಕದ
ಅಹುವೆ ಪಸರಲಿ ನೀಲಿ ನೀರ್ದೆರೆ
ಬಹುಪರಿಯ ಬಾನ್ ಬಳ್ಳಿದೆರೆಗಳು ಇಹುವೆ ತೋರೆಮಗೆ?
ಲ-೧೮
ಗಂಗೆ ಸಂಸ್ಕೃತಿಗಳಂತೆ ಜಗದು
ತುತ್ತುಂಗೆಯರು ಭೂತಲದಿ ಹರಿದಾ
ಅಂಗಸವಿರಾ ಗತಸ್ಥ ಚಿತ್ರಗಳನ್ನು ಸುತ್ತುರಿದು
ಶೃಂಗಗಿರಿ ಹಿಮವಾಲು ಪರ್ವತ
ತುಂಗರಹ ಹಿಮವಂತರಿಹರೇ
ಮಂಗಳಾಂತ ವಿಶಾಲ ವಿಶ್ವದ ಲೋಕಗಳಲಿಲ್ಲ?
ಲ-೧೯
ಜೀವಗೊಳ್ಳದಲಿ ಈ ಸತತಲಿ ಆವ್
ಭಾವ ಬಲ್ಲಿಯು ಮೇರೆಸುತಿಹೆವ್ವೆ
ಕಾವ ಶಿವ ಭವ ದೇವ ಶಂಭುವನೀಯೊ ಸಂಪದವ
ಸೇವೆ ಶ್ರದ್ಧೆಯು ಲಿಸಗುತಿಹೆವ್ವೆ
ಪಾವನವು ಈ ಜೀವ ಜನ್ಮವು
ಹಾವ ಲೋಕಗಳಲ್ಲಿ ಇಲ್ಲದ ಬಿಸಿಗೆ ಕೊಡುಗೆಗಳು
ಲ-೨೦

ರಾಮ ಲಕ್ಷ್ಮಣ ಭರತರಾ ಕಾಲ
ಧರ್ಮರಾಜರ ಶ್ರೀಕೃಷ್ಣರಾ ಬಲ
ಭೀಮ ಭೀಷ್ಮರು ಪಾರ್ಥ ಕರ್ಣಾರ್ಜುನರ ಸತ್ಯವಂತ ಬಲರು
ತಾವೆನಿಸಿದ ತವರಾಗಿಯುಹ ಈ
ಭೂಮಿಯಲಿ ಇಂದ್ಯಾರಿಗೆ ಸಿಕ್ಕುವರೊ?
ನಾವರಿಸ್ಯ ಸಮಾನ ಸಮಬಲರಿದ್ದರೇ ಜಗದಿ?
೭-೨೧

ಜೀವಬಲ ಸಮ ದಾರ್ಶನಿಕ ಸಂ
ಜೀವಿತಾ ಸಮಯೋಗ ಪ್ರೇರಕ
ಭಾವ ಬೋಧಕ ಸತ್ವ ಸಾಧಕ ಬದುಕಿ ಮೋಹಕವೊ
ದೇವಗಣ ಬಲದೊಡೆಯ ವಿಧಿಬಲ
ನೀವೆ ಹರಿಸಿದ ದೊಡೆಯ ಸಿರಿಬಲ
ನಾವು ನೋವನು ಜಯಿಸುವಾ ಛಲವಿದುವೆ ಬಾಳ್ಬಲವೊ
೭-೨೨

ವಿಧಿಗೆ ಮಣಿಯುತ ನಿತ್ಯ ಹೋಗುತ
ನವದಿನಕಾದೊ ದಿನದಿನವು ಕಾಯುತ
ಮಂದದಿ ಬಾಳನು ಹಸನುವಾಗಿಸಲೆಂದು ಶ್ರಮಿಸುತಲಿ
ಬದುಕಲೆಂದಿಗೂ ನಿತ್ಯ ದುಡಿಯುತ
ಹೃದಯವನು ನಿರ್ಮಲವ ನೈರ್ಮ
ಲ್ಯದಲಿ ಇಡುತಲಿ ಭವವನೀಗುವ ದಡವ ಪುಣ್ಯವಿದಾ
೭-೨೩

ಕಾಣದಿಹ ದೇವನಿಗೆ ನಮಿಸುತ
ಹಣ್ಣು ಹಂಪಲುಗಳನು ಈಯುತ
ಹೊನ್ನು ಹಣವನು ಹರಕೆಗರ್ಪಿತ ಅಹರು ಜನವಿಹುದೆ
ಪ್ರಾಣಿ ಪಕ್ಷಿಗಳಲ್ಲಿ ಜೀವವ
ಮಾನವರ ಪೊಲು ಪ್ರೀತ್ತು ಬದುಕಲ
ದಿನ್ನು ಏತಕೆ ಜನ ಮನ ನೋಯ್ಸುವ ಭ್ರಾಂತಿಯಾ ಬಿಡಿಯರೊ?
೭-೨೪

ಮನದಿ ಇಹ ಅರಿಷಡ್ವರ್ಗದ ಪರಿ
ಮನ ಕೆರಾದಿಗಳಲ್ಲಿ ಇರಲಾ
ಜನದಿ ಇಹ ಭಯವೆಂಬ ಶತ್ರುವೆ ಜನಕೆ ಮಾರಕವೊ
ಜನಿಸಿಹಾ ಜೀವಿಗಳು ನಿತ್ಯವು
ಜನನದೊಡೆಯನ ಭಯವ ತೊರೆದು
ಅನಿತು ಭಯವಿದೆ ಎಲ್ಲನೆಯ ವೈರಿಯಂದು ಹೃನ್ಮನದಿ
೭-೨೫

ಜಾತಿ ಮತಗಳ ಹೆಸರಿನಲಿ ಜನ
ನಿತ್ಯವೂ ಹೋರಾಡುತಲಿ ಯುಗ
ಸತ್ತು ಕಳೆಯುತಲಿನ್ನು ಬಂತೆಯೆ ಕಲಿಯು
ಎತ್ತಲೂ ಹರಿಯುತಿಹರೀ ಜನ
ನೆತ್ತರಿನ ಹೊನಲಿರಿಯುವುದ ತಾವ್
ಉತ್ತರದು ಏನ್ ಮತವು ಜಾತಿ ಆವೇಶದಿಂದರಿಯದೆಯೆ
೮೩೬

ಹೇಳುವುದು ತಾವೊಂದು ಆದೊಡೆ
ದಲ್ಲಿ ಮಾಳ್ಪುದೆ ಬೇರೆ ಎಂದೆನು
ತಿಲ್ಲ ನಡೆಯುವುದಂತು ಲೋಕದ ನಿತ್ಯ ವ್ಯವಹಾರ
ಬಲ್ಲವರು ಬಲ್ಲದರು ಎಂದೆನು
ತಿಲ್ಲ ದಿನದಿನವಂತು ನಡೆಸುತಿ
ಇಲ್ಲಿ ತೋರುತಲಿಹ ದೌರ್ಜನ್ಯವೆ ಜಗದಧೋಗತಿಯು
೮೩೭

ನಾಕವಾಗೆ ಈ ಜನ್ಮವೆನ್ನುತ
ತಾಳಲಾಗದೆ ನೊಂಗುತ ರತ್ತುತ
ಶೋಕದರಿಯಲಿ ತೇಲಿ ಬಳಲುತಲಿಹರೊ ಜನ ನಿರುತ
ಬೇಕು ಬೇಡದ ಬಿಸಿನ ಕಡೆಗೋಡು
ತುಕ್ಕು ಮುಕ್ಕುತ ಮನುಜ ಕಲ್ಪಿತ
ದುಃಖ ದುರ್ಧರ ದುಸ್ಸಹನೆ ದುರಾಚಾರವದೆ ಬದುಕೊ
೮೩೮

ನಾಟಕವು ನರ್ತನಗಳವು ಬಯಲು
ಆಟಗಳು ತೆರೆಮರೆಯ ಛಾಯಾ
ಕೂಟ ಚಿತ್ರಗಳಿಂದು ವಿವಿಧ ವಿನೋದ ನಾದಗಳು
ದಿಟ್ಟತೆಯ ಧೀಂಕಿಟದ ತನನಕ
ಜೊಟ್ಟಿಹಾ ಮತ ಬರತನಾ ಪ್ರತ
ನಾಟ್ಯಕಿದೊ ನಟರಂಗವೀ ಜಗವದೆ ಕ್ರೀಡಾಂಗಣವು
೮೩೯

ಕತ್ತಲೆಯು ಹಾವು ಆವಂಬಿ ಲೋಕವು
ದಣಿಯದೆಯೆ ಕ್ಷಣ ಬಿಡದೆಯೇ ಧಗಾ
ಭುಗ್ಗನೆ ಜ್ವಲಿಸುತ ಕೂಗುತಿವೆ ಮನ್ವಂತರಗಳಿಂದ
ಕತ್ತಲೆಯದಿಹುದೀ ಜಗದೆ ಇವೆಯೇ ?
ಕತ್ತಲೆಯುತಲಿ ಕಾಲ ಯತ್ನಕೆ ಶ್ರಮಿಸುತ್ತ
ಮತ್ತೆಯುವೆವೊ ವಿಧಿಗತಿಗೆ ಆದೆ ಈ ಬದುಕಿನಾ ಹದನ
೮೪೦

ಕೊನೆಗೊಂಬಲಿ ತೂಗು ಮರ್ಕಟ
ಮನಸನು ಹೋಲಿಸುತ ಮನುಜನಾರ್ಭಟ
ದಿನದಿನವು ಬಣ್ಣ ಹರಕೆಯಿಂ ಬೋಲು ಧ್ವನಿಸುತಿಹುದಲ್ಲಿ
ದಿನವು ರಾತ್ರಿಯು ಕಾಹಕ ಕವಚವು
ತನುಮನದಲಿ ವಿಷಯಲಂಪಟ
ತನದಿ ಮಾನವನಿನ್ನು ದಾನವನೊಳಿಹನೇ ಇಹದಿ
೮೪೧
ಆಳುವವನೇ ಕಾದಿಯುತಿರುವನು
ಕಾಳು ಕೊಳ್ಳನಿ ಕಸಿದು ತಿಗ್ಗುತ
ಗೋಳು ಬಿದ್ದವರನ್ನು ಸುಲಿಯುತ ಮೆರೆಯುತಿಹನಲ್ಲಿ
ಆಳುವವನಧಿಕಾರ ಮೋಹವು
ಸುಳ್ಳು ಗುಳ್ಳೆಗಳಿಂದ ದ್ರೋಹವು
ಬಾಳ್ಗೆಯನೆ ಹೋಲಿಸಿಗವುದು ಜಗವನ್ನು ವಂಚಿಸುವುದು
೮೪೨
ಮನು ಪ್ರಜೆಯು ಪ್ರಭುತ್ವವದುವೆ
ಮನು ಆರಿಸುವಿಕೆ ಚುನಾಯಕೆ
ದೀನ ಬಡಜನ ದ್ರೋಹದವ ವಾದ್ಯ ಕಹಳೆಗಳೊ
ಬೋನವನೆ ಎಸೆದಂತೆ ಬನವಿಗ
ಮನವು ಹಿಡಿಯುವ ತೆರನೆ ಜನಗಣ
ಮನ್ನ ಕೊಕ್ಕದ ಬಲೆಯಲಿ ಸಿಕ್ಕುವರಿವರೆ ನಾಯಕರು
೮೪೩
ಆಳರಸರಿಗೆ ನೀತಿಯಿಲ್ಲವಿರೆ
ಆಳುವಿಕೆ ಕ್ರಮ ಅಕ್ರಮವಿರೆ
ಆಲಿಸುವರಾರ್ ಬಡತನದ ಮನೋವ್ಯಾಧಿ ಬಾಧೆಗಳು ?
ತಾಳುವರು ವಿಧಿ ಎಂದಿಗದೆ ಸಹಜ
ಕೇಳುವರು ಸಿರಿ ಇಂದಿಗೇ ಸಹಜ
ದಳ್ಳುರಿಯನಿನ್ನುತ ತಳ್ಳುವರೊ ದಿನದಿನವನೇ ಭುವದಿ
೮೪೪
ಮಾತು ಮೇಲೋ ಕೃತಿಯು ಮೇಲೋ ?
ನೀತಿ ಮೇಲೋ ಖ್ಯಾತಿ ಮೇಲೋ ?
ನಿವೃತ್ತಿಯು ಮೇಲೋ ಸ್ಫೂರ್ತಿ ಮೇಲೋ ಹೇಳಲ್ವೆ ಸಜನೆ?
ಜಾತಿಮತಗಳು ಏಕೆ ಸಾವಿರ ?
ನೀತಿ ನಿಲುವಿಗೆ ಒಪ್ಪದಿಹ ಆಶೆ
ಖ್ಯಾತವಹ ಈ ವಾದಭೇದಗಳೇಕೆ ಇನ್ನುಮಗೆ?
೮೪೫

ಮೇಲು ಜಾತಿಯೆಂದೆನುವ ಜಾತಿಯೆ
ಕೀಳು ಕತ್ತಿಯು ಪೊತ್ತ ದೇಶವ
ಕೊಳ್ಳೆ ಹೊಡೆಯುತ ನೂರೆಗ್ಗೆಯುತ ಬಿದ್ದರವರೀಕೆ?
ಕೇಳುವರು ರಕ್ಕಸರು ಪ್ರಹಾರಿಗ
ಕೀಳಿದರು ಕೋಟಿಗ್ಗೆದು ಜನವನು
ಪಾಳೆಯ ಬೆಪ್ಪಿನ ನರಿಯನೊಂತ್ಯಾತ ಜೀವಿಸದರಂತೆ
೮೪೬
ಸತ್ಯ ಸಿದ್ಧಾಂತದೊಡೆ ಸಿದ್ಧಮಾರ್ಗವ
ಚಿತ್ತದಲಿ ಚಿರಂಜ್ಯೋತಿ ನೀತಿಯು
ಪೊತ್ತದರೆ ಸೌಜನ್ಯ ಸಿಮಂಗನಾವಿಹುದೆ ಲೋಕದಲಿ?
ಮೃತ್ಯುವದು ಕಾದಿಹುದು ನರಿತೆ
ಉತ್ತರೋತ್ತರ ಪಿಡಿವುದೋರದೆ
ಸತ್ತು ಕೊಡೆನುವರು ಜೀವಿಗಳು ನಿರತಮಾಯರಂತಾಗಿ
೮೪೭
ತೊಟ್ಟ ತೊಡಿಗೆಯು ಕುಟ್ಟಿ ಬಿಟ್ಟಿದೆ
ಉಟ್ಟ ಉಡುಗೆಯು ಹರಿದು ಹೋಗಿದೆ
ಇಟ್ಟ ನಂಬುಗೆಗೊಲಿದ ಕಂಬಿಯೆ ತಂಡು ಆದಪೊಲು
ಕೊಟ್ಟ ಮಾತಿಗೆ ಸಾಕ್ಷ್ಯ ಇಲ್ಲವೊ
ಇಟ್ಟ ಆಸೆಗೆ ಸತ್ವವಿಲ್ಲವೊ
ಕಟ್ಟಿದಾ ನೀರ್ ಕಟ್ಟೆಯಲಿ ನೀರಿಲ್ಲದೊಲು ಬದುಕು
೮೪೮
ಧರ್ಮ ನ್ಯಾಯವ ಲಕ್ಷಿಸದೆಯೆ ಆ
ಧರ್ಮದಲಿ ಜೀವನವ ಸಾಗಿಸೆ
ಧರ್ಮ ಮನ ಕಡೆ ತನ್ನೆಗಲಿ ಕೋಲ್ ಹರಟೆಯಂತಾಗೆ
ಕರ್ಮ ಆಕರ್ಮದ ಅಳಿಯುತಲೆಯೆ
ಧರ್ಮ ನೀತಿಗಳನ್ನು ಮರೆಯುತ
ಕರ್ಮ ಕೂಪದಲಿದು ಹುವನು ನರನೀತರನೊ ಜಗದೆ?
೮೪೯
ಮಾನವತ್ವವು ಸ್ವಾರ್ಥ ಪ್ರೇರಿತ
ದೀನರ ಕಷ್ಟದ ಚಿಂತನ ನಿಮಿರ್ನತ
ಮಾನ ಅಪಮಾನಗಳ ಎಣಿಕೆಯೆ ಇಲ್ಲದಿಹ ಹರಣಾ
ಕನ್ಯೆ ಶಿಶುವನು ಗರ್ಭನಾಶವದೆ
ಹೆಣ್ಣಿ ಸತಿ ಸಹಗಮನ ಸ್ತ್ರೀಧನ
ಮಸ್ಣತಳಿ ಜನ ರಕ್ತದಾಹದಿ ಕೊಂದಿಹರೊ ಜೀವಾ
೮೫೦

ಕೂಸುಗಳನು ಮಿಲ್ಕಾದಿಯಿನ್ನುತಿ
ತಾಸುಗಟ್ಟಲೆ ಸಾಯೆ ಜನದದು
ರಾತ್ರಿ ಕ್ರೈಯರ್ ವಿದೇಶ್ಕ್ಕೆ ಆದರೊಡೆ ಕ್ಷಾಮ ಬಡತನವು
ಪಾಸಿಸಲು ಎಡೆಯಿಲ್ಲ ಭವದಿ
ನೀಸಲನು ಮೇಲಿಲ್ಲ ಬದುಕನು
ಹಾಸಲಿನಿತೊಂದಾಶ್ರಯವು ಇಲ್ಲದಿರಲದೆ ಶೋಕಾ
೮೫೧

ಏನು ಭಾರತ ಭೂಮಿಯೆಂತ್ಪದು
ಏನು ಪಾಶ್ಚಾತ್ಯದ ಕಟ್ಟುನಿಟ್ಟಿವು
ಹೀನು ಆಕ್ರಮವು ಅನೈತಿಕತೆ ಅವಿಚಾರಗಳು ತವರೊ
ಮಣ್ಣಿಗೆ ಕಳ್ಳರು ದೇವರುಗಳೊಡೆ
ಅನೃತವು ಅನಾಚಾರಗಳು ವಿಧಿ
ಯೆನ್ನು ಕಲ್ಪಿಸುತದನೆ ಸಂಸ್ಕೃತಿಯೆಂದರಕೋ ಅಂದು
೮೫೨

ಗಂಡುಗಳಿಗಳು ತಾವುಯೆನ್ನುತ
ಕಂಡು ಕಾಣದ ಕಟ್ಟು ನಿಟ್ಟನು
ಬಂದರೊಲು ತಾವ್ ನೇಮ ಕರ್ಮವದೆಂದು ಸಾರಿದರು
ಹೆಂಡಿರನು ಹೆಣ್ಣಿಗಳನು ಪರ
ಚಂಡಿಕಾ ಬಲ ದೇವಿಯರ ಸ್ತ್ರೀ
ತಂಡವಾ ಕಾಮಾಕ್ಷಿಯರ ಕೆಳತಳ್ಳಿದರು ಅಂದು
೮೫೩

ಮನು ಅಗಸ್ತ್ಯರು ಯಾಜ್ಞವಲ್ಕ್ಯರು
ಸನಕ ಸನಾತನರು ಪಂಡ್ಯರಾ ಮುನಿ
ಗಣ್ಯರು "ನ ಹಿ ಸ್ತ್ರೀ ಸ್ವತಂತ್ರಮರ್ಹತಿ" ಎಂದೆನುತಲಂತು
ಮನುಜ ಕುಲದಾ ನಾಗರೀಕತೆ
ಯೆನದೊ ಹಿಂದಕೆ ಹಿಂದಕೆನ್ನುತ
ಲೀನಸುತಲಿ ತಳ್ಳಿದರು ದೇಶವ ಕತ್ತಲೆಯ ಯುಗಕೆ
೮೫೪

ಶೈಶವದಲಿ ವಿವಾಹವೆನ್ನುವ
ಕೂಸುಗಳಿಗೆ ವಧುವರರು ಎನ್ನುವ
ಹೇಸದಾ ಸಂಸ್ಕೃತಿಯೇನು ಸುಕೃತಿಯದೇನು ಸಂಸ್ಕೃತಿಯೊ
ಕಾಸು ಕೂಳಿಗೆಂದೆನುತ ಸ್ತ್ರೀಧನ
ದಾಸಿಯಲಿ ಹೆಣ್ಣುಗಳ ಪರಿಸುವ
ಮೋಸ ಕಪಟದ ಕ್ರೂರತನ ಮಾನವತೆಗವಮಾನ
೮೫೫

ಎಳವೆಯಲಿ ಹೆಣ್ಣುಗಳ ಹಿರಿಯರು
ಹಳಬರಿಗಿಂತಿಂದಿನಂತೆ ಮದುವೆಯು
ನೊಂದರು ಎಡೆಗಂತ ಬಾಳ್ವೆಯನೆ ಬರಡಾಗಿಸಿದರಂತು
ಎಳೆದರಣ್ಣೆಯರನಂತು ಪತಿಗೃಹ
ಬಲಿಗೆ ಬೀಳಿಸಿ ಸ್ತ್ರೀಧನದ ನೆವ
ದಲ್ಲಿ ಕಾಡಿಹ ಮೋಹಿಗಳ್ ಕುಲಗೇಡಿಗಳೊ ಪಲರು
೮೫೬

ವಿಧವೆಯರಿಗೆಳೆ ಹರಯದಲಿ ಹದಿ
ಬದಿಯರೆನೆ ಸತಿ ಸಹಗಮನದಾ
ಅಧಮ ನೀತಿಯು ಕಲ್ಪಿಸಿದ ಕುಲಗೋತ್ರ ಯಾವುದದು?
ವಿಧಿತ ಹೆಣ್ಣಿಂದಾವ ನೀತಿಯದ ಬರೆ
ನಿರ್ದಯದ ನೀತಿ ಪ್ರವರ್ತದಾ ಕೋಲಿ
ಯಂದೆ ಅಧರ್ಮವು ಅಂಧ ಶ್ರದ್ಧೆಯು ಅಕ್ರಮದ ಬಲಿಯು
೮೫೭

ಗಂಡುಗಳಿಗೀ ವರೆಗು ಜಗದಲಿ
ಹೆಂಡಿರೊಲು ಹೆಣ್ಣುಗಳನು ವಂಚಿಸಿ
ಬಂಡುತನದಾ ಬಲ್ಮೆಯಲಿ ಕಾಡಿಸುತಲವರಂದು
ಹೆಂಡಿರನು ಕೀಳ್ವರ್ಗವೆನ್ನುತ
ಕಂಡರಿಯದಾ ನೀತಿ ಪ್ರೇರಿತ
ಷಂಡತನವನೆ ತೋರಿದರಿಗೆ ಏನ್ ಗಂಡುಗಳು ಹಿಗ್ಗು!
೮೫೮

ಹೆಣ್ಣಿಗಾ ತವರಲ್ಲಿ ಹಕ್ಕನು
ಹೊನ್ನು ಹಣಗಳಲಿಷ್ಟು ಪಾಲನು
ಮಾನ್ಯವಹ ವೇದಾದಿ ವಿದ್ಯೆಯ ಪಡೆವ ಭಾಗ್ಯವನು
ಕನ್ಯೆಯರಿಗವನೇನು ನೀಯದೆ
ಕಣ್ಣಿ ಕರುಳನು ಕಟ್ಟಿ ಬಾಲ್ಯದೆ
ಅನ್ನೆಯದೆ ಬದುಕನ್ನು ವಿಧಿಸಿದುದಾವ ದೈವವವೊ!
೮೫೯

ಬೌದ್ಧ ಕ್ರೈಸ್ತರು ಪಾರ್ಸಿ ಇಸ್ಲಾಮ್
ಸಿದ್ಧ ಹೆಣ್ಣಿಂದಾವ ಜೈನರ ಯೋ
ಹಾದ್ಯರಾದಿಗಳೆಲ್ಲ ಹೆಣ್ಣುಗಳನಂತು ಪೊಂದಿರಿಸಿ
ಸಾಧು ಸಂತರ ಸಿಂಧ್ಯವಹುದಾ-
ಬದ್ಧವಹ ಹಲ ವಕ್ರ ನೀತಿಯು
ಸದ್ದಕೂ ಯುಗದಾದಿಯಿಂದಲಿ ತಂದರೀ ಯುಗಕೆ
೮೬೦

ಹಿಂಗಿಸಿರ ಕಾಲ ಬಲವನಿಲ್ಲವೆ
ಹಂಗಿಸಿದರಾ ಆರ್ಯಜರ ಬೆತ್ತ
ಸಂಘಟಿತವಾ ಶೃತಿಯು ಸ್ಮೃತಿಗಳುಂ ಬಂದವು ದೇಶದಲಿ
ಅಂಗನೆಯರಸದಂತವು ಜನದ
ದಾರಂಗಿಯರನಾ ಕಣ್ಣೀರ ಹರಿಸಲು
ಬಂಗಕೊಳ್ಳದಿಸಿರಲದಂವೆ ಪತಿಗಿತ್ತ ಬೃಷ್ಟಿತಿಯು
೮೬೧

ಶಿಶುವಿವಾಹವು ಹತ್ಯೆಗಳುಂ ಶಿಶ್
ಕೊಸಿತಗಳುಂ ವಿಧವೆನತಿ ತಕ್ಕೆವ
ಕ್ಲೀಬದೊಡೆ ವಿಧವೆಯರ ಹತ್ಯವು ಕ್ರೂರ ವಿಧಿನಿಯಮಾ
ದ್ವೇಷ ಜಡಲತ್ತೆ ಸ್ವಾರ್ಥದೊಡೆಯರು ದು
ರಾತ್ರೆಯರೊ ಪರಹಿಂಸೆ ದ್ರೋಹವ
ನೆಸಗಿ ಹಿಗ್ಗುವ ಖುಳ್ಳ ಗಂಡರಸಿರುವರಿ ಷಂಡರವೊ
೮೬೨

ನರಬಲಿಯುಐವದು ಎನ್ ವಿಚಿತ್ರವೊ
ಕಾರಿಗಳಾದವು ಕೊಳ್ಳಿ ಕೋಣಂಗ
ಳಿರಿದು ರಕ್ತವನೊಪ್ಪಿಸಲುವಾ ದೇವಸೇತರಸೊ,
ಸಿರಿಯೊಂ ಶಿಶುಬಲಿಯೊನತತ ಮಾಡ್ಯದಿ
ಬರಿದೆನಿಸಿದ್ರಿ ಶಂಷ್ಟ ವಿಧಿ ಇಹ
ಪರವದೊಪ್ಪದ ಪಾತಕವೊ ಕೇಳ್ ಭ್ರಷ್ಟಾಚಾರಗಳುಂ
೮೬೩

ಶೈಶವವು ಆದೆ ಮೊದಲ ಹೆಜ್ಜೆಯು
ಕೊಸಿತಗಳು ತೆರೆ ಜೀವಿ ಜಂತುಗ
ಳೀಸಿತವೊ ಬಾಲ್ಯವಾ ಕೌಮಾರ್ಯದಾವಸ್ಥೆಯೊಳು
ಪೋಷಕವು ಯೌವನವು ದಾಂಟೆ
ತ್ಯಾಗ್ರಮಯವು ಗೃಹಸ್ಥ ಜೀವನ
ದಾ ಸರಿಯೊ ವೃದ್ಧಾಪ್ಯವದು ಕಡೆಗಾಲವದುವನಿತೊ
೮೬೪

ಪೆಳ್ತನಿಸಿಹ ಕಾಲ ದೇಶವು
ಪೆಳ್ತವ ಪಾಪದ ಕರ್ಮ ಸಾವಿರ
ಗಳನು ಇಂದಿಗು ಕಟ್ಟಿ ಬಚ್ಚಿಡುತ ತಂತವ ಸಾಯುತಿವರು
ಮೊಳೆತವ ಚಿಗರಿದ ಜಾತಿ ಭೇದವು
ಬಲಿತವ ನಿಲ್ದುರವಾಗಿ ಹಬ್ಬಿರೆ
ಕಾಲಕಾಲಂಬಗಳಿಲ್ಲ ಸ್ತಂಭಗಳಂತೆ ನಿಲ್ಲುವುವೆ,
೮೬೫

ಜನವು ಆರ್ಥಿಕ ಭೇದದೊಡೆ ಮತ್ತೆ
ವನಿತೆಯ ಜಾತಿಯು ಲಿಂಗಭೇದವು
ಯೆನಿತು ಸಾವಿರ ಭೇದದಲಿ ಹೊರಳುತ್ತಿಹರವರಂತೆ
ಜನದ ಸಂಖ್ಯೆಯು ಲಕ್ಷವಿಹ ಕೋಟ್
ಮಣಿಗಳನು ವಿಂದಿರಿಸಿ ಕಾಡಿಸೆ
ಅನಿತೆ ಮಣಿಸರದ ದಾರದೊಳಗಡಗಿಸದಿರಲೇಕದುವೊ?

೮೬೬

ಕತ್ತಲಲಿ ಹಗಲಲ್ಲಿ ಯೆನ್ನದೆ
ಮತ್ತರಾಗುತ ರಮಿಸುತ್ತಿರುವ ದ್ವಿ
ರಿತ್ರಿಯಗ ಜೀವಿಗಳಿಲಾ ಮಾನವರಿ ಗಣ್ಯರವೊ
ಮೈಥುನಕೆ ಮಿತಿದಿನ ಮಾಸ ಕಾಮ್ಯ
ನಿತ್ಯ ಲೈಂಗಿಕ ವಿಸ್ತೃತವೆನ್ನುತ
ಚಿತ್ತವೊ ಸ್ತ್ರೀಕಾಲದ ಭೋಗಕೆಯೆಂದೆನಿಸಲೆಂತೊ

೮೬೭

ಪುರುಷ ಸ್ತ್ರೀಯರು ನಾಡು ನಗರದಿ
ನಿರತ ವೇಶ್ಯಾವೃತ್ತಿಯಾಟದಿ
ಹಣವನು ಕಳೆಯುತ್ತ ಹಣವನು ಗಳಿಸುತ್ತಿಹರಂತೊ
ಶಿರವು ರಾಜ್ಯವು ದಾವ ಜೀವಿಯು?
ನರನ ದುರ್ಗತಿಗೆಲ್ಲಿ ಮಿತಿ? ಈ
ಬರಿದೆನಿಸಿಹ ಟೊಳ್ಳು ಜೀವದ ರೀತಿಯದುವಕ್ಕೆ!

೮೬೮

ದ್ವೇಷ ನಿರ್ಮಿತ ಜಾತಿ ಎರಡನು
ಶಾಪನಷ್ಟ ಎಂದೆನಿಸಿ ಮೆರೆಸುತ್ತ
ಜೀವನವ ಗೆಲುವಾಗಿಸದ ಜನ ಜೀವಿ ಮರುಳುಹನ್ನೆ
ನೋವು ನಲಿವಿಗೆ ಒಪ್ಪುತಲಿ ಸಾಗ
ವೀವ ಹೆಣ್ಣುಂಡುಗಳು ಜಾತಿಯು
ಭೂವಲಯದಿಂದಿರಲು ಮತ್ತೆ ಸಾಹಸ್ರ ಭೇದಗಳು

೮೬೯

ಎತ್ತ ಕಟ್ಟುತ ಭೇದ ಭಾವವ
ಕತ್ತಿ ಕೋವಿಗಳಿಂದೆ ಜನಜನ
ಚಿತ್ತಲೂ ನಿಜ ಹತಿಸುವರು ರತಿದ್ವೇಷದಿಮರಳು
ಭ್ರಾತೃ ಭಗಿನಿಯರ ಶೋಕೆಯುಳ್ಳದೆ
ಮಿತ್ರ ಬಂಧುಗಳೆಂದು ಗಣಿಸದೆ
ಮಿಶ್ರ ಹತ್ಯೆಗಳಲ್ಲಿ ಕಾಲವು ಕುಟುಂಬಗಳು ಇಹವೊ

೮೭೦

ದೇವರುಗಳು ಪದೇಸತು ಕಾಲವೊ
ಗೈವ ಹಾಹಾವಿಧ ದೀಕ್ಷೆ ಭಕ್ತಿ
ದೇವರನು ತಾವ್ ನಿರ್ಮಿಸುತ್ತಲೇ ಎಸಗುತಿಹರಹಿತ
ಕಾವವನು ತನ್ನಲ್ಲಿ ಇಹನೆಂ
ಜೀವಚನವದ ಮರೆತಿಹ ಮಾನವ
ಸಾವು ನೋವಿನ ಗಹನವರಿಯದೆ ಮೊರೆಸಗುವನು ಹಾಹಾ

ಲ-೨೧

ಸಮರಗಳು ಕಾದಾಟವೇಕವು ?
ಸಮರಸವಿನ ಜನ ಬದುಕಲಾರದೆ
ಅಮರ ಜೀವಾ ಯೋಗವಾಗದುದನ್ನು ತಿಳಿಯದೆಯೆ
ಕಾಮ ಮೋಹೋದ್ರೇಕದಾ ಮನ
ಮಾರ್ಮಿಕಾವಹ ಹೀನ ಜೀವನ
ಮಮತೆ ಮಮಕಾರದೆಡೆ ತೊಳಲುತ ಹೊಂದುವುದು ಮರಣ

ಲ-೨೨

ವಿದ್ಯೆ ಮನುಜಗೆ ವಿಭವ ತೋರದೆ
ಸಿದ್ಧಿಯನು ಪಡೆಯುವುದನರಿಯದೆ
ಬಿದ್ದು ಏಳುತಲಿಹನು ಗತಿಮತಿಯನ್ನು ತಿಳಿಯದೆಯೆ
ಮುದ್ದು ಜೀವಿಗಳಿಹವೆ ಸೊಗದಲಿ
ಸಿದ್ಧ ಸಾಧುಗಳೊಲವು ಜೀವಿಸೆ
ಗೆದ್ದು ಹರಿ ಜನ ತಮ್ಮೊಳಿಹ ದೈವತ್ವವನು ಅರಿತು ?

ಲ-೨೩

ಮಾನವನ ಮತಿಗೆಟ್ಟು ಬಾಳನು
ದೀನ ದಾರಿದ್ರ್ಯತೆಯ ತೆರವನು
ಮಾನಸಿಕವಾ ಬೆಸನಗಳ ಪರಿಪೂರ್ಣ ಚಿತ್ರವನು
ಜ್ಞಾನ ನಯನಗಳೊಡೆಯೆ ನೋಡಲು
ದೀನ ಕ್ಷೋಭೆಯ ಅರಿಷಡ್ವರ್ಗವ
ದನ್ನು ಜಯಿಸದೆ ಜಗವೆ ಕದನದ ಸದನವಾಗಿಹುದು

ಲ-೨೪

ದೈವ ದೃಷ್ಟಿಯಿಂದು ಎನುತಿಹ
ಭೂವಲಯವಿದು ಅವಿಸ ಜಲದಿಂ
ದಾವರಿಸೆ ಇರೆ ಹಿಮವು ಘನ ಮರುಭೂಮಿ ಬೆಟ್ಟಗಳು
ಉರ್ವಿಯಲಿ ಇವು ತುಂಬಿ ಇರಲಾ
ಜೀವಿಕೋಟಿಗೆ ಆಹುತಿದೆಹುತ
ಜೀವಿಸಲು ಸಾಲದೆಯಿಹುದು ಈ ಭೂವಲಯ ನೆಲವು

ಲ-೨೫

ದೇವನೇನದು ವಿಸ್ಮಯದ ಸೃಷ್ಟಿ
ಜೀವಿಗಳನೀ ನೆಲ ಜಲದಲಿತ್ತು
ಪಾವನದ ಧರೆಯಲ್ಲಿ ತುಂಬಿರಲದುವೆ ದೈವಬಲ
ಸಾವು ಹುಟ್ಟುವು ಸುಖವು ದುಃಖವು
ಭವ್ಯ ಬಾಳಿನಗಳಿಗೆಯಿದು ಬವಣೆಯು
ಆವ ಲೋಕಗಳಂತಿದೆಯೊ ಹೇಳೆನಗೆ ಈಶ್ವರನೆ
೮೨೬
ನಡೆಯು ನುಡಿಯೊಡೆ ಸರಸ ವಿರಸವು
ಸಹನೆ ಸಾತ್ವಿಕ ಸಮತೆ ಮಮತೆಯು
ಮಹದ್ವಂದ್ಯ ವಿಚಾರಯೋಗವು ಧರ್ಮ ಕರ್ಮಗಳು
ಬೃಹತ್ ಸೃಷ್ಟಿ ವಿಶಿಷ್ಟ ಜೀವಿಗ
ಳಿಹವೆ ಇರಲಿನ್ನಾವ ಲೋಕದ
ಅಹುದೊ ನರನಾಗರಿಕತೆಯ ಜಾಲ ಬದುಕು ಕೌಶಲಗಳು
೮೨೭
ಪ್ರೇಮಗುಣಗಳು ಪ್ರೀತಿಸ್ನೇಹ ಸಮರಸ
ಕೋಮಲತೆಯಾ ಮನವನೀ ಸಿರಿ
ಕಾಮ ಮೋಹಾದಿಗಳು ನೆಲೆಮನೆಯಾಗಿಹರಂತು
ಸಾಮರಸ್ಯವುದೇನು ಇಲ್ಲದ
ತಾಮಸದ ನೆಲೆವೀಡಿನೊಳು ಇಹ
ಕರ್ಮಪ್ರೇರಿತ ಜೀವವನು ಜಯಿಸಿಹನೆ ದೈನ್ಯನಹೋ
೮೨೮
ಕಾನನದ ಜೀವಿಗಳು ಸರ್ವವು
ಆನೆ ಹುಲಿ ವಾನರವು ಖಗಮಿಗ
ಮೀನು ತಿಮಿಂಗಿಲಗಳಿನ್ನು ಬಹು ಪರಿ ಜಲಚರಾದಿಗಳು
ಶ್ವಾನ ಮಾರ್ಜಾಲಗಳು ವರ್ಗವು
ಹೀನ ಸುಂದರವೇನು ಮೋಹಕ
ಶ್ರೇಷ್ಠ ಜೀವಿಗಳವುವೊ ಧನ್ಯವಾದೆನುತ ಉಳಿಸಿರಲಿಲ್ವೆ
೮೨೯
ಮಾನವರವೊಲು ಜೀವಿಜಂತುವು
ಕಾನನದ ಮಿಗ ಖಗದ ರಾಶಿಯು
ಜ್ಞಾನಶಕ್ತಿ ವಿರಾಜಿತವೊ ಜಲಚರವು ಲೋಕದಲಿ
ಮಾನದಲಿ ಹಲ ಜನ್ಮ ಪಡೆಯುವ
ಶ್ರೇಷ್ಠೋತ್ತಮ ಮನಮೋಹ ಜೀವಿಗ
ಳನ್ನು ಉಳಿಸಿದೊಡಿದುವೆ ಸುಂದರ ಬದುಕು ಬಂಧುರವೊ
೮೩೦

ಆಗಾಯವು ಕೋಗಾಯವು ಚರಾಚರಗಳು
ಪ್ರಾಣವು ಕಾಲ್ಪ ನಿಶ್ಚಿತ್ಯ ವಸತ್ತ್ವವು
ಜನವು ಜಂತುಗಳಲ್ಲಿ ವಿವಿಧಾವಸ್ಥೆಯಲ್ಲಿ ನಿರಂತ
ಜನನ ಮರಣಾಗಳಿದೆಯೆಂ ಇಹಯಾ
ವನವು ಮಳೆಬೆಳೆವು ವಸಂತ ಶಿಶಿರವು
ದಿನದಿನವು ವಿವಿಧಾ ಕೃಷಾವಸ್ಥೆಗಳು ಜೀವಿಗಳ
ಲಾಲಾ ೧

ಶಿಷ್ಟ್ಯತಿಗಳ್ಗಾ ಹಂದರಗಳೊಡೆ
ಸ್ವಚ್ಛವಹ ಮಲ್ಲಿಕಾ ಬೀಡಗ
ಶಿಷ್ಟ ತನಿಗೊಳ್ಳು ನವತತ್ತ್ವ ಪ್ರಾತಃಕಾಲಕೆಗಳ್ಗಾ ಹೊದರು
ಶಿಷ್ಟಪಿಲ್ ಪ್ರಿಯಾಂತ ಬಯಲಗ
ಶಿಷ್ಟ್ಯತಿಹ ಶಿಸುದೇರಿಯೊ ನವತತ್ತ್ವವ
ತ್ಯಿಷ್ಟ ಬಾಂದಳು ಚಿಟ್ಟಗಿರಿಗಳು ನವ್ಯ ರಾಜಿಪವು
ಲಾಲಾ ೨

ಉಳಿಸಿರೆ ಈ ಮೋಹಕಾವಹ
ಹೊಲಿಸು ಹಸುರಿನ ನೀಲಬಾನಿನ
ಹೊಳಕು ತೇಲ್ಗಡಲುಗಳು ಲಿಸಿಯುವ ಮುದ್ದು ಜೀವಿಗಳು
ಕಳಿ ಬೆಳೆಗಳ್ಗಾ ತಿನಿಸನೊಡೆ ಪಿನ್
ಶಿಲಗಳಿಂದಲಿ ಜೀವಿಸುವ ಚೆಲು
ಗೆಲುವಿನಾ ಜೀವಿಗಳಿಗುಳಿಸಿರೊ ನಿಸ್ಸಂಶಯವ
ಲಾಲಾ ೩

ಬೀರು ಕೊಳೆತ ಮೊಡೆಲ್ಲಿ ವೃಕ್ಷವು?
ನೀರರಿಯು ಮೊಡದಲಿ ಹಣ್ಣುಗಳು?
ಸೋರುತಿಹ ನಡಿಯಲಿ ಪವಿತ್ರವಡಲದೊಂ ಡೋನ್ ಸಬಿವ್ರೋ?
ಕಾರಿರುಳ ಗಗನದಲಿ ತಾರೆಯು
ಮಾರಿ ಧೀಯಲಿ ಮಿಂಗಲಗಳುವು
ತೋರುತಿಹ ಪೌರುಷದಿ ಶೀಲವು ಇಲ್ಲದೊಡೇನ್ ಸೊಗವ್ರೋ?
ಲಾಲಾ ೪

ಕೆಟ್ಟಿತಿಹ ಕಾಲನೀತಿ ನಂಟುವು
ನೆಟ್ಟು ಬೆಳೆಸುವ ಸಸಿಯು ಧಾನ್ಯವು
ಕಟ್ಟು ಬೀಯದ ನೆಲ್ಲಿ ಕಣ್ಣಿಯು ಶಿತ್ತವಾಯಕವು
ಹುಟ್ಟುನಾವುಗಳಂತಿರದ ದಿನ
ಗಟ್ಟಿ ವರುಣಗಳನ್ನು ಹರುಷದಿ
ದಿಟ್ಟತನ ನೀತಿಶಿಕ್ಷಣೆಯೊಡೆ ಕಳಿಯುವುದು ಶುಭವಹುದು
ಲಾಲಾ ೫

ಕಾಡುಗುಡ್ಡಗಳನ್ನು ಕಡಿಯುತ್ತ
ನಾಡು ನಗರಗಳನ್ನು ಕಟ್ಟುತ್ತ
ಬೀಡು ಬಡಾವಣೆಗಳನ್ನು ಭವ್ಯದಿ ಸಾಧಿಸಲು ಎಳಸಿ
ಕೇಡುಗರ ಕಾಲ ಹಿಚುಕುತ್ತಲೆ ಇರೆ
ಕಾಡುವರು ಕಾದಾಡುತ್ತಲೆ ಇರೆ
ಮಾಡುವುದು ಏನ್ ಬಾಳ್ ನೆಮ್ಮದಿಯು ತೀರಿಯೆ ಆಗಿಹುದು
೧೧೬

ಕೋಟಿಗಟ್ಟಲೆ ಹಣವ ಕೂಡಿಸಿ
ತೋಟ ಹೊಲ ವಿಸ್ತಾರವಾಗಿಸಿ
ತೊಟ್ಟುದೆಲ್ಲವ ಚಿನ್ನವಾಗಿಸಿ ವೈಭವವ ಮೆರೆಸಿ
ಅಟ್ಟಹಾಸದೆ ಬದುಕಿಹರು ಬಿ
ಗ್ಗಿಟ್ಟು ಸಾಯುವ ಬಡಜನದವೊಲು
ಕೆಟ್ಟು ಅಳಿವ ಭಿಕಾರಿಗಳವೊಲು ಸುಟ್ಟು ಅಳಿಯುವರು
೧೧೭

ಅನಿತಿರಲು ಜಗ ಅದನು ಅರಿತೂ
ಜನವು ನಿತ್ಯವು ಅಕ್ರಮಾಕ್ಕೆ
ತ್ಯಾಸ್ಪತದಲೇ ಜೀವ ಸವೆಯುವ ಗಹನವೇನದುವೊ
ಧನಕನಕದ ದುರಾಶೆಯೊಡೆದಾ
ಜನ್ಯವಾಂತಾ ಕೇಡು ಕುಹಕದೆ
ಜನವು ಜನವನು ಕಡಿಸಿ ವಂಚಿಸಿ ವಧಿಸಿ ಹಿಗ್ಗುವರೊ
೧೧೮

"ಅಂದಿಗದೆ ಸುಖ ಇಂದಿಗದೆ ಸುಖ"—
ಎಂದೆನುತ ಅಹ ಜೀವನದಿ ಜನ
ಕುಂದು ಕೊರತೆಗಳದುವು ಸರಿಯೆಂದೆನುತ ಭಾವಿಸರೆ
ಹಿಂದಿನಾ ಗತ್ಯಾದ್ಯಮರ್ಶವಿಲ್ಲವ
ಹಿಂದು ಹಿಂದಕೆ ತಳ್ಳುತ್ತಲೆ ಜನ
ಮುಂದಿನಾ ಇರವನು ಅನಿಶ್ಚಿತದಲ್ಲಿ ಅದ್ದಿಹರೊ
೧೧೯

ಅದುವೆ ಬಾಳ್ ಬದುಕದುವೆ ಜೀವನ
ಎದುವೆ ಲೋಕವು ಚಲನೆಯಾ ಹರಿ
ಯಿದುವೆ ಆಟವು ಕೂಟಗಳು ಸ್ಪರ್ಧೆಯವು ಎಲ್ಲ
ಮದವು ಮೋಹವು ಮತ್ಸರವು ಸಿ
ಹೃದಯತೀಗೆಯೊಡೆಗೋಡದೆ ಕಾಡಿಸಿ
ಎದುವೊ ಜೀವಿಗಳನು ಪರಸ್ಪರ ದ್ವೇಷದಲಿ ಇರಿಸಿ
೧೨೦

ಕ್ಷಣವು ಕ್ಷಣವೆಂದೆನುತ ಯುಗದಿರಿ
ದಿನಗಳವು ದಿನಗೂಡಿ ದಿನಗಳು
ಎನಿತು ಕಾಲದ ಬಳ್ಳಿಯು ಬೆಳೆಯುತ್ತ ಅಹುದಿಹುದೆ
ವನ ಬನಾದಿಯು ಹೊಲಬಯಲು ಕೃ
ನದನದವು ಭೂಮಿಯು ಗಗನ ಸಾಗರ
ಇನ ಶಶಿಯು ಬ್ರಹ್ಮಾಂಡ ಸರ್ವವು ಚಲಿಸುತ್ತಲಿ ಇಹುವೊ

೮೯೧

ಆರು ದಿಕ್ಕುಗಳಾಯು ವಿದಿರಲಿ
ಆರು ಖಂಡಗಳವಿದ್ದ ಸಾಗರ
ತೀರದ ದಿನ್ನೆಗಳಲಿ ಎಡೆಹುತ ಬದುಕಲದೆ ಚಲಿವು
ದಾರಿ ಕಾಯುತ ನೀದೊ ಬೆಳಗುತಿ ಹುದ್ದೆ
ಸಾರವಿಲ್ಲದ ಭೂತ ಶಕ್ತಿಯು
ದಾರಿಸುವುದಾ ಯಕ್ಷ ಕಿನ್ನರರೊಲವೊ ಮಾನವರಾ

೮೯೨

ಇನಿತುಯುಗ ಈ ಲೋಕದಲಿ ಕಾಲ
ದಿನದ ಬಾಳ್ವೆಯು ಹಸನುವಾಗಿಸೆ
ಮನದ ಮರುಕವಿನಂತೆ ಮರೆಸುತೆ ನಗುತ್ತಿರ್ಪ ಮುದದೆ
ನೆನೆಯುದಿಯು ಮುಂದಿನ ದುರಂತದ
ದಿನಗಳನು ಮರೆಯುತ್ತ ಹೊಸತರ
ಗತಿಗೆ ಮನಸೋತ್ತಮ ಚಿತ್ತ ಸ್ಫೂರ್ತಿಯುದನ್ನ ಬೆಳಮ್ಮಿಸಿರ್ಪ

೮೯೩

ತುಂಬು ಪ್ರೇಮದ ಹೊಮ್ಮಿಸುತ್ತಲಿ
ಕಂಬನಿಯಲಿ ತೆರೆದು ದುಃಖದಿನ
ನಂಬಿಕೆಯ ನೆಮ್ಮಗಿಯುದಿಹ ದೀಪಗಳು ಎಡೆಹಾದು
ಉಂಬುದನು ಗಳಿಸಲಿಹ ಬಗೆಯಿಂ
ತುಂಬುದಕೆ ಗತಿನೀತಿ ಇಲದಿರ
ಲಂಬಿಗನ ಬಲಿಹುಗದ ಮೋಸ್ಗಳ ತೆರನ ವಿರಸ್ಥಿತಿಯೊ

೮೯೪

ಗಗನದಲಿ ಹಾಯಾಗಿ ಹಾರುತ
ಸೊಗದೆ ಗಾನಂಗಳುವ ಬಳಸಿಯು
ಖಗಗಳವು ನೆಲಗಿಳಿಯುವಿರೆ ಕಾಳ್ ಕೂಳ್ಗವದಕಿಲ್ಲಿ?
ಜಗದ ಉದ್ದಗಲಕ್ಕು ತಿರುಗುತ
ಬಗೆಬಗೆಯ ಬದುಕಲಿ ಬೆರೆಯುತ
ಜಿಗಿದೋಡೆಯು ತಾಯ್ನಾಡ ಮರೆತೋಡದೆಮ್ಮ ಕಾಲವಿಲ್ಲಿ?

೮೯೫

ದೇಶದಿಂದಾ ದೇಶಕೆಸುತತಲಿ
ವಾಸಿಸಲು ಜನ ಹೊರಿದು ಉದರವ
ಪೋಷಿಸಲು ಎಂದೆನುತ ಸಂಚರಿಸುತ್ತಲಿಹರಂತು
ಭಾಷೆ ಕಲೆ ಸಂಸ್ಕೃತಿಯು ಬಗೆಬಗೆ
ಬೀಸುಗಾಳಿಯು ಅಗ್ನಿ ಜಲವಾ
ಕಾಶವವುವೊಂದೆನಿಸೆ ಭೂಮಿಯು ವಿಶ್ವಭುವನವಿದ್ರೆ

೮೯೬

ಉತ್ತರದ ಸಾಗರದ ನೀರ್ ಪೊ
ಪ್ರಾತ್ತರದಲಿ ದಕ್ಷಿಣಾಕದ ಹರಿವುದು
ಸುತ್ತ ಬೀಸುವ ಗಾಳಿ ಈ ಭೂವಲಯದ ವ್ಯಾಪಕವು
ಮಿತ್ರನೆಂದು ಹಾರಾಡುವವು ಖಗ
ಮಿತ್ರಲೂ ಪೂರ್ವಾಪರದ ತಿರು
ಹುತ್ತಲಿಹರಾ ಜನವು ಜಗದೀರೇಳು ಖಂಡದಲಿ

೮೯೭

ಮರಳುಗಾಡನು ಹಿಮದ ಬೀಡನು
ದರಿಯು ಹುದ್ದರ ಹಳ್ಳ ಗುಡ್ಡಗ
ಳಿರದ ವಾಸಕೆ ಸಮಗೊಳಿಸಿರ್ದೆ ಯಾಂತ್ರಿಕಾ ಬಲದೆ
ಏರುತಿಹ ಜನಸಂಖ್ಯೆಯನು ನಿಲಿ
ಪೂರಿಸಲು ವಾಧುನಿಕ ತಾಂತ್ರಿಕ
ತಾರಕದ ವೈಜ್ಞಾನಿಕಾ ಸಾಧನೆಯು ನೆಲಿವನೆಯು

೮೯೮

ವಾಸಕಿಹ ಸ್ಥಳವಿಹುದು ಧರೆಯಲಿ
ನಾಶಕಿದೆಗೆಸೆದಂತ ಕಟ್ಟಿರೊ
ಭೂಶಿರದ ತುದಿಯಿಂದ ಗಿರಿದುದಿವರೆಗೂ ಭೂಮಿಯೊಳು
ವಾಸಕೊಪ್ಪದ ತಂಡು ಹಿಮ ಬನ
ದಾಸರೆಯು ಮರುಭೂಮಿ ಸುತ್ತಸು
ಮಸ್ಯೆ ಬಗೆಹರಿಯುತ್ತ ಭುವಿಯನು ಹಸನುಗೊಳಿಸಿರಲ್ಕೆ

೮೯೯

ಮೃತ್ಯು ಜನನಗಳಿರದೆಯೆ ಜೂಗುವ
ಸತ್ಯ ಸಿದ್ದಿಗಾ ಸಿದ್ಧಾಂತವು ನಲ
ಮಿತ್ರ ಜೀವಿಗಳೀ ಭುವಿಯೊಳಿರುವವಲ್ಲ ದಿನ್ನೆಲ್ಲಿ ?
ಪೃಥ್ವಿಯೊಳಿ ಮಾಡಿದೀ ಭುವವಿ ಶಿರ
ಮಾರ್ಗವಿದು ಶಿರಮೋನ್ನತಾ ಸಿಂ
ಹಿತ್ತಿಮಿದು ಬೇರಾವ ಲೋಕದಲಿಲದ ಜನ್ಮವಿದೊ!

೯೦೦

(ಒಂಬತ್ತನೇ ಶತಕ ಸಂಪೂರ್ಣವು)

ಹತ್ತನೇ ಶತಕವು. 328

ಶ್ರೀ ಸಿದ್ಧಿಮಾನಿ ನಾಮಾನ್ವನೆ
ದಾರ್ಶನಿಕಾಭಿವಂದ್ಯನೇ ಕೈ
ಲಾಸವಾಸಿಯೆ ಭಕ್ತವರ ನೀನೆಲ್ಲಿ ಹೆಸೊ ಬಾರಾ
ಭಾಷೆಗಳು ಭಾವವು ಸಮನ್ವೀಭಿ
ಲಾಷೆಗಳಿಗಾಶ್ರಯನೆ ಮತನ್ವೀವಿ
ಲಾಸಿ ಮಿಷ ನೀನ್ ಲೋಕವಿದ ಬೆಳಗಿಲ್ಲೇ ಮಾನವನೆ!

೯೦೧

ಕಲಿಯುಗವು! ಕಲಿತನದ ಲೀಲಾಸ
ತಲೆಹರಾ ಸಿಲಗುಡಿಯು ಗೋಪುರ
ಗಳವು ಮತಕೆ ಬಚ್ಚಿಡಲೊ ಮನ್ ಜಗದ ಪಾಪಗಳಾ?
ಬಳಸಲೆಂದ ಶಸ್ತ್ರಗಳು ರಾಶಿಯಂ
ನೊಲದೆ ಸಂಗ್ರಹಿಸುತ್ತಲದನು ದೇ
ಗುಲದೆ ಬಚ್ಚಿಡುತಿರಲದೇನ್ ದೇವನವನೆಲ್ಲಿಹನೊ?

೯೦೨

ಕೊಲ್ಲಿ ಕೊಲೆಯೊಡೆ ಜನವ ನಿತ್ಯವು
ಬಲಪ್ರಯೋಗದೆ ಜಾತಿ ಮತಗಳು
ಬಲಿಯೊಳುದಗಿಸಲೇನು ಧರ್ಮವೊ ಧರ್ಮಾಂಧತೆಯು ಮದೊ?
ಗಳಿಸಿರಲಿ ತಮ್ಮತ್ಯೆ ಕೋಪ್ಪುವ
ಪಾಲಲಿತವೊ ಸತ್ಯಮಾರ್ಗ ಪ್ರವರ್ತನವ
ನೊಲದೆ ಕೇಳ್ ಕೃತ್ರಿಮದ ದೈವವೋದೇಕೆ ಮಾನವನೇ?

೯೦೩

ಕಾಲದಿಂದಾ ಕಾಲಕೆನುತ್ತಲಿ
ಬಾಳುತಿಹುದು ಬದಲಾಗುತ್ತಿರೆ ಜನ
ಪೀಳಿಗೆಯು ಹೊಸಯುಗದ ಗೆಲುವನು ಸ್ವಾಗತಿಸುತ್ತಿಹುದು
ಕೇಳುರಿಯುತಿಹ ಕೋಪಗಾಲದ
ಬೀಳುತ ಬಾಳ್ವೆಯು ದಿನವು ಸರಿಯಲ
ದೇಳುತ ಲೋಕವು ಹಸನುಗೊಳ್ಳುತಿಂದೇನುವುದೆ ಬದುಕು

೯೦೪

ಸೃಷ್ಟಿಯಿದು ವೈಚಿತ್ರ್ಯವಿರೆ ಕ್ರಮ
ಸೃಷ್ಟಿಯಿಂದೇ ಜೀವಿಗಳು ಪರಿ
ಪುಷ್ಟಿಯಾಗಲಿ ಬೆಳಗಲೆಂದೆನುತಾಗಿಸಿದರಾರ್ಯರ್ ಜಯ
ಇಷ್ಟದಲಿ ನಡೆಸಿದರು ಬಹು ಕಾ
ಲೇಯ್ಮ್ ಯುಗವನಂದಿಯೆ ವರವ
ಶಿಷ್ಟರುಗಳಿಂದವರ ಕಾಲವೆಲ್ಲಿದೆಯೊ ಕಾಣೆವಿದೊ

೯೦೫

ಜನವು ಸಾಲ್ಸರಿ ಹೊಡಿದೊಡೆಯೂ
ಮನವು ನಲ್ಸತ್ತಾಗಿ ಕದಡಿರೆ
ಜನವು ರಾಷ್ಟ್ರಗಳೆಲ್ಲವೊಂದಾಗಲು ವಾದದ ಭ್ರಮೆಯೊಳಿನಲಿ?
ಮನವದರಿಡಂತೊಪ್ಪದಿರೆ ಕೇಳ್
ಜನವು ಜಗದಲಿ ಬಿಮ್ಮತ್ತದಿ ಬಿ
ಮನ್ನವದಿ ಬಲ್ಮೆಯೊಳಿಹರು ಎಂದಿನಿದಿಲದು ಕನಸಿನಲಿ?

೯೦೬

ಬಿಳಿಗೆ ತನುವಿಂಬೊಲಿಹ ಹೃದಯದಲಿ
ಹುಳುಕು ಕೊಳ್ಳಕುಗಳಾದಿ ತಾಮಸ
ಗಳೊಡಿಯೇ ಮದದ ಲೋಭ ಮತ್ಸರ ಕ್ರೋಧ ಮೋಹಗಳು
ಉಳಿದಿರಲು ಮೀ ಬಗೆಯಲಿನ್ನೇನ್
ಗಳಿಸಲಿಹುದೀ ಜನ್ಮದಲಿ ಕೇಳ್
ಬಿಳಿಸಲಿಂತ್ಯ ಸತ್ಸ ನಿದ್ವಲ ಸಾರ ಸಂಪದವ ?

೯೦೭

ಬೀಡು ಹೊಲವೇನಿಲ್ಲದಿಹ ಜನ
ಕೂಡಿ ಕಟ್ಟಿಹ ಬದುಕೆ ಸುಖವಿಂ
ದಾಡು ಕೇರಿಗಳು ತೆರನಿ ತಿರುಗುತ ಸಾಗಿಪರು ಜೀವಾ
ಕಾಡು ಗುಡ್ಡಗಳಾಡುಂಬೊಲದಲಿ
ಗಿಡ್ಡ ಗೇಣುಗಳುತ್ತೆಸಲಿ ನಲಿ
ದಾಡುತಿಹರೀ ಪ್ರಕೃತಿಯು ನಲ್ಲಿಮರರಂತೆ ನಿಜದಿ

೯೦೮

ಗಿರಿಜನದ ನಿಬಿಡ ವನದ ಆರ್ದ್ರ
ಶರಧಿಯಾ ಚೆಂಬಿಹಮೆ ತೀರ ಕದಲಿ
ದೂರದಿಹ ಪಾಸ್ತ್ರಲ್ಯದಲಿ ಉತ್ತರದ ಭೂಮಿಯಲಿ
ಹರಡಿಹರು ಹಿಮಗಡ್ಡೆಗಳ ಎಡೆ
ಸರಸಿಯೊಳಲಿ ಮಿಂದುಂಡು ಮೀನಳು
ಧರ್ಣಿಯೊಳಿ ಬಲವಾಂತು ಜೀವಿಪರಿನ್ನು ಮೇ ಜನವು

೯೧೦

ಆಧುನಿಕ ವ್ಯವಹಾರದಲ್ಲಿಹ
ವ್ಯಾಧಿ ಬಾಧೆಗಳೇನು ಅರಿಯದ
ಸಿದ್ಧ ಸಾಧುಗಳಲ್ಲಿ ಹರು ನಿಷ್ಕಲ್ಮಶದ ಮನದಿ
ಎದ್ದು ರವಿಯನು ವಂದಿಸುತ ಶಿರಿ
ಶುದ್ಧ ಆತ್ಮದೆ ಮನ್ಯ ಜೀವಿಯೊ
ಲಿದ್ದರೂ ಜಗದಲ್ಲಿ ಬಾಳ್ವರು ಗಿರಿಜನದ ಬಳಗಾ

೯೧೧

ಕಾಡು ಗುಡ್ಡಗಳಲ್ಲಿಹರು ಜನ
ಗೂಡು ಗುಡಿಸಲುಗಳ ಕಟ್ಟಿ ಕೂಡುತ
ಹಾಡುತಾಡುತ ಕೇಕೆ ಕೂಗಲಿ ಚಿಗರಿ ಹಾರಿವವು
ಓಡುತಿಹ ಮೊಲ ಜಾಗುತಿಹ ಕಪಿ
ಕಾಡುತಿಹ ಮದ್ದಾನೆ ಕರಡಿಯು
ಕೂಡಿ ಮೇಯುವ ಹುಲಿ ಚಿರತೆಗಳೆ ಸಖರು ಗಿರಿಜನಕೆ
೧೧

ಬದುಕುವುದೆ ಜನನಗಳು ಗಹನವು
ಬದುಕ ಸಾಧಿಸಿದುದೆ ರಹಸ್ಯವು
ಹುದುಗಿದುದು ಪರಿಸ್ಥಿತಿ ಸಹಾಯದೆ ಬದುಕಲದೆ ಸಾಗವು
ಎಚ್ಚರದೊಳಾ ಸ್ವರ್ಗವಿರುವೆ ಹಕ್ಕಿಗ
ಆದರದೆ ಸಂಪ್ರೀತ ಜೀವನ
ಎದುರಲೇ ಬಾಳ್ ಕಲೆಯಿತು ಸೈನ್ಯ ಸಾಮಾನ್ಯವು ನಿಜದೆ
೧೨

ಸ್ವಚ್ಛ ಸುಂದರ ವನವು ಜಲ ಹೊಲ
ಹಚ್ಚ ಹಸುರಿನ ಹೊದಿಕೆಯು ಹುಲ್ಲಿಲ
ಪಚ್ಚೆ ಲತೆಯ ಗಿರಿಶಿಖರಗಳು ಮಲೆನಾಡ ಮೋಹಕವು
ಅಚ್ಚ ಪಚ್ಚೆಯು ಬಣ್ಣ ಚಿತ್ರದ
ಪಚ್ಚೆ ಗರಿ ಗಿಳಿ ನವಿಲು ಕೋಗಿಲೆ
ಮೆಚ್ಚಿ ದಸಿಗಳ ಬಣ್ಣ ಹಕ್ಕಿಗಳಾಶ್ರಯವೆ ಚೆಲುವೊ
೧೩

ತೋಡು ತೊರೆ ಕೆರೆ ಹೊಳೆ ಹಲ ಕೆರೆ
ಆಡುತಿವೆ ಖಿಲಖಿಲನೆ ಖಗ ಬಿಡ
ಗೂಡುತಲಿ ಕಲಹಂಸಗಳು ಕೊಲ ಕಾರುಳಿ ಹಾರಿವವು
ಕಾಡು ಕಂದರ ಸರೋವರ ಮಲೆ
ನಾಡು ಕುಸುಮಗಳಿಹುವೊ ತರತರ
ಕಾಡಿಸದೆಯೇ ಉಳಿಸಿರಲಿ ಈ ಸೃಷ್ಟಿಯಾ ಚೆಲುವ
೧೪

ಪ್ರಾಣಿಪಕ್ಷಿಗಳಿಲ್ಲ ಲೋಕದ
ಗಣ್ಯ ಜೀವಿಗಳೆನಿಸಿ ಮೆರೆದಿರೆ
ಮಾನವನೆ ತಾನ್ ಪೇಳಲೆನುತ ಹಿರಿಹಿಗ್ಗುವನು ಏಕೆ?
ಎನಿತು ಸುಂದರ ಗೂಡು ಗುಹೆಗಳು
ಜೇನ್ಹುಳದ ನೀಲಿ ಜೇಡನಾ ಬಲೆ
ನಿರ್ಮಾಣಿರುವೆಯು ಹುತ್ತಗಳು ಸಮನಿಹುವೆ ಮನೆಕಟ್ಟಿ?
೧೫

ಕಿರಿದೆನಿಸಿಹಾ ಕ್ರಿಮಿಯುಂ ಕೀಟವು
ಹಿರಿದೆನಿಸಿಯಿಹ ಆನೆ ಸಿಂಹವು
ಶಿರದಿಯೂ ಪಿಂಬೊಲದ ಮಾನವ ತಿಮಿಂಗಿಲಾದಿಗಳುಂ
ನಿರಿಸಿದಲ್ಲಿ ನಲ ಬಲವ ತೋರಿರೆ
ವಿರಸಕೆಡೆಗೊಡದಂತೆ ಸಲಹಿರೆ
ಶಿರಮ ನಿಂದರ ಕರುಣೆ ಪ್ರೇಮದೆ ನೋಳ್ಪುದವು ನಮ್ಮ

೯೧೬

ಉಂಟುವದು ಮತ್ತಿಕರ್ಣಿವೆಯಲಿ ನೂ
ರೆಂಟು ಬಗೆಬಗೆ ಕರೆವೆ ಕಾಳ್ಗಿಗ
ನೆಂಟುಗಳುಂ ಪ್ರಾಕರೀಟದೊಲು ತಲೆಗೊಂಬು ಚಿತ್ರವಮಯಾ
ತ್ತುಂಟರೊಲು ಕೊಂಬಾಟಪೊಡೆ ಕರೆ
ಕಂಟೆಯಲಿ ಮಿಂದಿದ್ದ ನೆರಳಲಿ
ಗಂಟು ಕೋಲ್ತಿಂಬುಗಳು ಕೌಲು ಕೌತ ವಿರಮಿಪವು ಎಲ್ಲ

೯೧೭

ಉತ್ತರದ ಸೈಬೀರಿಯಾದ ನೆಲ
ದತ್ತಲಕೊ ಕೆನಡಾ ಕೌಳಿರ್ಜನಲ
ಕೈತ್ಯದಟ್ಲಾಂಟಿಕ ಬ್ರಿಸ್ಲಾಪ್ಸ್ಟ್ರೇಲ್ಯವಾಫ್ರಿಕದಿ
ಚಿತ್ರಮಯವು ಮೃಗಾಲಯದವೊಲು
ಬಿತ್ತರಿಸಹುವ ಖಗಮಿಗವು ಕೇ
ಳಿತ್ತಲೂ ಸೈನಗರದಾ ಸಿಂಹತ್ತಿ ತಿಂಬಿಹುವೊ

೯೧೮

ರಮ್ಯತಮವೀ ಸೃಷ್ಟಿಯಿದು ಚೆಲು
ಧರ್ಮತತ್ವಗಳೆಲ್ಲ ವಿಹವದೈ
ಸೌಮ್ಯತೆಯು ಪ್ರಪಂಚದಾ ವಿವಿಧತೆಯು ಜೀವಿತದಿ
ಕೋಮಲ ಮಾನವ ಪಾತ್ರವೆನಿತಾ
ಹುಮನ್ನಿಗನಲವತಾರ ಮಾತ್ರದ
ಸ್ವಾಮಿ ಆರಾಧನವವನೆ ಉಳಿಸೈ ಜೀವಿಕೋಟಿಯನು

೯೧೯

ಇನಿತಿಹಾ ಸೃಷ್ಟಿ ಪ್ರಕೃತಿಯ ಗತಿ
ದಿನದಿನವು ಕಲ್ಲಿಗತಂದುದಿಹುದತಿ
ಯೆನಿತು ಮೊರೆವುವೊ ಜೀವಿರಾಶಿಯು ನಿತ್ಯ ದನಿಯೆತ್ತಲಿ
ಬನಸಿರಿಯು ಗಿರಿದರಿಯು ಹುಲ್ಲೆಲ
ಕಣಿವೆ ಕಾನನಗಳವು ಬಂಜರು
ಯೆನಿಸಿ ಜೀವಿಗಳೆಲ್ಲವುಗಳ ವಿನಾಶ ನಿಶ್ಚಯವು

೯೨೦

ಸಾಗರದ ನೀರ್ ಆವಿಯಾಗಿ ಮೇ
ಲಾಗಸಕೆ ಏರುತ್ತ ಏರಾಗುತಿರೆ
ಜಗತ್ತಲಿ ನೀರ್ ಹಾರದಲಿ ಮಳೆಯಾಗಿನಿಸ ಬೀಳುತ್ತಿರೆ
ಮೇಗದಲಿ ತೊರೆ ಹೆದ್ದೊರೆಗಳವು
ಸಾಗುವುವು ಧುಳುಧುಳುನೆ ಹರಿಯುತ್ತ
ಸಾಗರವ ಸೇರುವುವೊ ತೋಯಿಸುತ ಭೂಮವ್ಯೋಮಗಳು

ಕ-೧

ಸದ್ದು ಗದ್ದಲವೇನು ಇಲ್ಲದೆ
ಕದ್ದು ಹುಟ್ಟಿದ ತೊರೆನೆ ಹರಿಯುವ
ಶುದ್ಧವಹ ನದಿನದಗಳವೊ ಸಹಸ್ರ ಓಡುವುವು
ಎದ್ದು ತೆರೆಹುತ್ತ ಬಳುಕಿ ಹಾರುತ್ತ
ಉದ್ದಗೂ ಹರಿಯುತಿಹ ಎಮೆಸಿಸ್ನ
ಮುದ್ದು ಭೂತಲ ತೋಯ್ದು ಹಸನಾಗಿಸುವ ಗಂಗೆ ಅವೊ

ಕ-೨

ನೀರ ಹೊಳೆಗಳವೆಷ್ಟು ಹರಿವುವು
ನೈಲ ಡಾನ್ಯೂಬ್ ಸಿಂಧು ಓಲ್ಗವು
ಕಾಲ ಮಾಹಿನಿಯುರೋಲು ಹರಿಯುವ ಸಹಸ್ರ ಗಂಗೆಯರೊ
ಕಾಳು ಬೆಳೆ ವನ ಪ್ರಕೃತಿಯು ಜನ
ನಾಡಿಗಳಿಗೂ ಆವು ಹರಿಯು ತೋಯಿಸುತ
ಬಾಳಿಸಿಯುನೆ ಹಸನಾಗಿಸುವ ಹೆದ್ದೊರೆಗಳವು ಹಲವೊ

ಕ-೩

ನೀರು ನೆಲ ಗಿಡ ಬಳ್ಳಿ ಮರಗಳು
ಏರಿ ಹಿಗ್ಗುವ ಹಿಮವರ್ತಾಗ್ರ ವಿ
ಸ್ತಾರವಹ ಸಾಗರಗಳವು ನಭ ವಾಯು ಅಗ್ನಿಗಳು
ಸಾರುವುವು ಜೀವನಕೆ ಪ್ರೋತ್ಸಾಹ
ಧಾರಿಣಿಯ ನೆಲೆ ಆದುವೆ ಭೌತಿಕ
ಸಾರ ಶಕ್ತಿ ಆಹಾರ ಮಾಂತ್ರಿಕವದಿತುವೆ ತಾಂತ್ರಿಕವು

ಕ-೪

ಗುಡ್ಡ ಬೆಟ್ಟಗಳೆತ್ತರದಲ
ಹಬ್ಬಿರುವುವು ಮೃಗಪಕ್ಷಿಗಳು ಜನ
ಗಿಡ್ಡ ಹಿತ್ತಲ ಹಿತ್ತಿಲಗಳನು ತಿಂದು ಜೀವಿಪುವು
ಗೊಡ್ಡು ಕಾಳ್ ಬೆಳೆ ನಾಲದಿಸುತಲಿ
ಕಾಡು ಮಿಗ ಜನ ಸಹಚರರ ಓಡಿ
ಗೂಡಿ ದುರ್ಬಲರ ಹರ ಹಿಂಸಿಸಿ ಜೀವಿಸುವುದೆ ಬದುಕು

ಕ-೫

ವನ್ಯ ಮಾಂಸಾಹಾರ ಜೀವಿಯೋ!
ಕಾನನದ ಜನ ಜನದ ಮಾಂಸವ
ಪ್ರಾಣಿಗಳು ಎಲ್ಲಿ ಜೀವಿಗಳನ್ನೇ ಕೊಂದು ಭಕ್ಷಿಸುವವು
ಮೀನುಗಳು ಮೊಸಳೆಯು ತಿಮಿಂಗಿಲ
ಶ್ವಾನ ಮಾರ್ಜಾಲಾದಿ ವರ್ಗದ
ಪ್ರಾಣಿಗಳು ವನ ಜಲಚರಾದಿಗಳನ್ನೆ ತಿನ್ನುವುವೋ
೫೧೬

ಪ್ರಾಣಿಹತ್ಯೆಯೊಡಂತೆಯೇ ಜನ
ಹಾನಿ ಹಿಂಸಾಕೃತ್ಯವಿಹದಲಿ
ಕ್ಷಣ ಕ್ಷಣಕೆಯೆಂಬಂತೆ ನಡೆಯುತಲಿಹುದು ಲೋಕದಲಿ
ವನ್ಯ ಜೀವಿಗಳಂತೆ ಅಂತೆಯೆ
ಮಾನವನೆ ಹಿಂಸಕನು ಎನಿಸುತ
ಕಾಣಿಸನೆ ತಾನಸತ್ಯದಿಹ ಮತ ಧರ್ಮ ಶಾಸ್ತ್ರತೆಯು
೫೧೭

ಉರುಳಿಹುದು ಯುಗದಾದಿಯಿಂದಲಿ
ಧರೆಯು ಹಿಂಸಾಕೃತ್ಯವನಿಕಾ
ಗರಮೆನಿಸುತಲಿ ಪರಿಯುತಿರಲದಕೇನು ಬಗೆಯುದೆಯೆ?
ಮರುಗಲೇನಿಹುದಿಹದೆ ಜೀವಿಗ
ಳರಸುತಲಿ ಜೀವಿಗಳನವು ತನು
ತಿರುಳುವದೆ ಬಾಳ್ ಬದುಕಿನಾ ಬಗೆಯಲ್ಲವಿನ್ನೇನು?
೫೧೮

ಸಾವು ನೋವಿಗೆ ಕೊನೆಯು ಇದೆಯೆ?
ಬೇವು ಬೆಸನಕೆ ಮೂಲವದು ಈ
ಜೀವಿ ಜಂತುಗಳಿಹದೆ ಪಾತ್ರಿಹ ಬದುಕಿನಲಿ ಇಹುವೋ
ಮೇವು ತಿನಿಸಿಗೆಯೆಂದು ಜೀವಿಯೆ
ಜೀವಿಗಳ ಮೇಲುತಿರಲು ಲೋಕದಿ
ಜೀವ-ಆತ್ಮದ ಅರಿಯದು ಬರೆ ಶೂಲಿಯಂತಿಹುದು
೫೧೯

ಸಸ್ಯಗಳಲಿಹ ಜೀವವದುವೆ ವು
ನಸ್ಯನಲಿ ಇರಲಂತು ಭೂತಳ
ವಿಶ್ವದಲಿ ತೇಲುವುವು ಚರಾಚರಾದಿ ಜೀವಿಗಳು
ಭಾಷೆಯರಿಯದ ಮೂಗ್ಗು ಕಲ್ ಪಿಲ್
ಸಸ್ಯ ಆಳುವುವು ನಗುವುದವು ಸಂ
ತೋಷವನು ತೋರುವುವು ಬಾಡುವುವದೆ ಸಾಕ್ಷಿ ಆತ್ಮ
೫೨೦

ತಗ್ಗ ತಳದಲಿ ಮರ್ನ್ ಮೊಳಕೆ ಮಿಡಿ
ನುಗ್ಗಿ ಚಿಗುರುತಲಂತು ಬೆಳೆಯುತಲಿ
ಹಿಗ್ಗುವುದು ತಾಯ್ ಭೂರಮೆಯ ಶಿಶುಗಳವು ತಾವೆನುತ
ಬಗ್ಗಿ ಬಳುಕುತ ಸಸಿ ಬೆಳೆಯುತಿಹ ಪೊ
ಮೊಗ್ಗೆಗಳು ಕುಡಿ ಚಿಗುರಿ ತೋರುತ
ಹಿಗ್ಗುತಿಹವು ತಾವ್ ರವಿ ಬೆಳಗನೀ ಮೂದಲಿಪ ತೆರವು

೨೧

ವನದ ಸುಂದರ ಹಸಿರು ಹೂವಲಿ
ವನದ ಮೃದುತರ ಹೂವೆಸಳುಗಳು
ಬಣ್ಣ ಹೂಗಳು ಗೊಂಚಲಿಂದಾರಣ್ಯ ಕಂಗೊಳಿಸಿ
ಪ್ರಾಣಿ ಪಕ್ಷಿಗಳಾದಿ ಬಹುತರ
ಬಾನ ಬೆಳಗುವ ಸಪ್ತವರ್ಣ ಲಾ
ವಣ್ಯ ಮೀರಿಸಿ ತೊಳಗುತಿಹುದೀ ರಮ್ಯತಮ ಸೃಷ್ಟಿ!

೨೨

ಮೈಮರೆತು ಹಾಡಿಹರು ಕವಿಗಳು
ಪಾಮರರು ಕೊಂಡಾಡಿಹರು ಕೇಳ್
ಸಾಮವೇದದ ಗಾನ ಮೊರೆದರು ಮುನಿವರರು ಅಂದು
ತಾಮಸವ ನಿತ್ತ್ರಸವದಾಗಿಹ
ರಾಮನಾಮಯ ಕವನ ಪ್ರಕೃತಿಯು
ಕ್ಷೇಮವಾಗಿವೆ ದಟ್ಟಡವಿಯು ಆಶ್ರಯವ ನೀಡೆನಗೆ

೨೩

ವ್ಯಾಸಮುನಿ ಶ್ರೀ ವಾಲ್ಮೀಕಿ ಕಾಳಿ
ದಾಸ ಭಾಸರು ಬಾಣ ಕವಿ ಶ್ರೀ
ಹರ್ಷ ಭವಭೂತಿಯರು ಹಲವರು ಹಾಡಿದರು ಬನದಿ
ಭಾಷೆಗಳು ಸಹಸ್ರಾರು ಇರೆ ಬನ
ವಾಸ ಹಂಪನ ತೆರನೆ ಇಹನೊ ವಿ
ಶೇಷಗಳು ಬನ ಬಾಡಲರಿತಾನ್ ನೆನೆವೆ ಮಲೆನಾಡಾ

೨೪

ಉಳಿಸಿರಲಿ ಮಂಗಳದ ಕಾಡನು
ಬೆಳೆಸಿರಲಿ ಶೃಂಗಾರವ ಹಾಮರ
ಹಲಸು ಆಲಸು ಜೋತ ಬಿತ್ತವು ಬಿದಿರು ಪೊದರುಗಳು
ಬೆಳೆಸಿರಲಿ ಹೂಬನದ ತೋಟನು
ಮೊಳೆಸಿರಲಿ ಹಸ್ಪಿಲದ ತೋಟವ
ಹುಲುಸೆನಿಸಲೀ ಬನವು ಬಯಲಲಿಪೊ ಹಸಿರು ಹಂದರಲಿ

೨೫

ಸಸ್ಯ ಸಂಪತ್ತನಿತ್ತು ಸಲಹುವ
ವೃಕ್ಷವೆಂಬುದನರಿತು ವೃಕ್ಷದ
ರಾಶಿಯನು ಸಾಲ್ಮರಗಳನು ಹೂಬನಗಳನು ಉಳಿಸಿ
ಪೋಷಿಸಿದರವರೆಂದು ವರನೃಪ
ವಿಟಪಿಗಳವರೆಗೆ ಪಾರಮಾರ್ಥಿಕ
ವೈಸರಿಯನುಳಿಸಿದರು ತಾರಾ ಲೋಕದರ್ಶನಕೆ

೯೨೬

ಚಿತ್ರಕಾಡಿಗಳಿಲದ ಭೂಮಿಯು
ಪಿತ್ರವಿಲದಾನಿಪ್ಪ ಪ್ರಭುವು
ದಿಟ್ಟತನವನು ಪಾಲಿಸದೆ ಸಂಕಷ್ಟದಿಹ ಮನವು
ಕಟ್ಟುನಿಟ್ಟನು ಪಾಲಿಸದ ಜನ
ದಟ್ಟಡವಿ ಮರವಿಲ್ಲದಿಹ ಬನ
ಸುಟ್ಟು ಕೆಟ್ಟಿಹ ಬಂಜರಿಹ ನೆಲವೊಲು ನಿರರ್ಥಕವು

೯೨೭

ಜೀವಿಕೋಟಿಗಳಿರಕೆ ಸುಖ ಮನ
ಭಾವ ಜೀವಿಗೆ ಸ್ಫೂರ್ತಿ ಸ್ಪಂದನ
ಹಾವಭಾವ ವಿಲಾಸ ಖಗಮೃಗ ಕೇಲಿ ಕ್ರೀಡಾಂಗಣವು
ಮೇವು ಸೊಪ್ಪಿನಹಾರ ಭೋಜನ
ದೇವ ಸುರವನಗಳವೊ ಪಾವನ
ದೇವತೆಗಳ ವಿಹಾರ ಭೂಮಿಯೊ ಚೆಲುವೃಂದಾವನವು

೯೨೮

ಭಾವುಕತೆಗೊಂದಷ್ಟು ಭವ್ಯತೆ
ಕಾವ್ಯರಸಕೊಂದಷ್ಟು ಹೊಸಗತಿ
ಜೀವಿತಕೆ ಒಂದಿಷ್ಟು ನವ್ಯತೆಯಿತ್ತ ಹೃದಯದೋರ್ಪ
ಶ್ರಾವಣದ ಶೃಂಗಾರ ಪ್ರಕೃತಿ
ಯೇ ವಸಂತದ ತಂಬು ಮುತ್ತುಗತಿ
ದೇವನಾ ಪರಿಹದ್ದಿನಶನದಾ ವೈವಿಧ್ಯವದೆ ಪ್ರಗತಿ

೯೨೯

ಭೋರ್ಗರೆಯುತಿದೆ ಬಿಡದೆ ಘೂರ್ಮಿಸು
ಸಾಗರದ ನೆರೆತೆರೆಗಳವು ಅತಿ
ವೇಗದಲಿ ಮಿಳಮಿಳನೆ ಹರಿವುದು ತೆರೆ ಚೆಲುವ ಜತೆಯಲಿ
ಜೊಗು ಘುಳುಕಿಸುತ ತೇಲ್ವತಲೆಗಳು
ಹಿಗ್ಗುತಿರೆ ಬೆಂಗಿರನಾ ಧೂಳಕಿಗೆ
ನುಗ್ಗುತಿಹ ಪಾತಾಳದಿಂವೊ ಮೀನ್ ತಿಮಿಂಗಿಲಾದಿಗಳು

೯೩೦

ಜಲಮಯವೊ ಈ ಭೂಮಿಯಿದು ಭರಿ
ಜಲಧಿಯಿಂದಾವರಿಸಿ ಇರೆ ಕಿರಿ
ಮೇಲಿನ ಹೊಲ್ದಲಾ ತೆರೆಯ ಹರಿಯುವುದು ಮೂಡಣದಿ
ಸಿಲಿಲಿತೆಪುವಹ ತೆಂಕಣದತ್ತ
ಬಿಲರದುತ್ತರ ಹೈಮವತನ
ನೆಲೆಯ ದಾಯುತ ಬೀಸುವುದು ಕೊಳ್ಳಿಮಸಂಜು ಸಾಗರದಿ
॥ ೪೧
ಅಲುಗುತಿಹ ಮರದೆಲೆಯ ತರುಲತೆ
ಗಳುವು ತಂಬೆಲರೊಡೆ ವಿಹರಿಸುವ
ಎಲರು ಎಲೆ ಹೂ ಮುಗುಳ್ಗಳೊಡೆಯೆ ಮಾತಾಡುತಿಹುದದುವೊ,
ನಿಲುಗೆಯಲಿ ಕಲ್ಪಿಸಿ ಬಿರುನುಡಿ
ಗಳನು ಸಡಿಸುತ್ತಿಹವೊಲಾ ಹೂ
ಮೆಲಿಯಲು ಸಡಿಕಿನಲದು ರುವುವು ಬಿರುಗಾಳಿ ಬಿರುಸಿಗವೊ
॥ ೪೨
ಕೊಳ್ಳಿ ಕೊಳ್ಳು ತೊರೆಯಾಗಿ ಉಕ್ಕುವ
ನಾಲ್ಗೆ ನಳಿಗೆಯು ನೀರು ಸಾಗರದಿ
ಕಲ್ಲಿ ದಿನ್ನೆಗಳೊಡೆಯೆ ಸೆಲ್ಲಿಸುತ್ತ ಹರಿಯುವುದು
ಮೆಲ್ಲನೆಯೆ ಜುಳುಜುಳುವೆನುತಲದೊ
ಸಲ್ಲಿಸಿ ತಿರುಹುತ್ತ ಘುಳುಕುತ್ತ
ಕಾಲದೆರೆಯೊಳು ಲಿಲ್ಲ ನೆಡಲಿ ಹರಿಯುವುದು ಹಿಡಿಗರೆಯು
॥ ೪೩
ಹೊಳೆಸುತಿಹ ಕಾಮರ್ಗಿಲು ಬಾನಂ
ಗಳದ ವಿವಿಧತೆಯಿಂದ ಈ ಜನ
ಗಳನು ಜೀವಿಗಳನ್ನು ನೋಡುತ್ತ ಕಂಗೆಡುತ್ತಗಲುವವೊ,
ಇಳೆಯಲಿ ಕಾಳಗಿಡುತ್ತಲಿಹುದೆಂದೆನು
ತಲವು ಮರುಗುತ ಕಂಬನಿಯ ತಾವ್
ಮಳೆಯೆನಿಸಿ ಧುರಧುರನೆ ಮಿಡಿಯುತ ನೆಲವ ತಣಿಸುವವು
॥ ೪೪
ಲೋಕದೊಂದೆಡೆ ಜೀವಿಗಳು ಬಹು
ಶೋಕದಲಿ ಇರಲಾಚೆಯೊಂದೆಡೆ
ಸೊಕ್ಕಿ ಬಿಂಕದೆ ಮೆರೆಯುವರು ತಿರುತಿರುಗುತಿಹ ಜಗದ
ನೆಕ್ಕಿ ನಲಿಯುವ ಜೀವಿಗಳು ಸಿಮ
ಯಕ್ಕೆ ತಕ್ಕಲು ನಿದ್ದೆ ನರಲಕೊ
ಆಕ್ಷರೆಯ ಬಿಟ್ಟೆತ್ತಿ ಹೆಪ್ಪು ಮಗುಚೊಂದೆದೆಯೊ ಜಗದ
॥ ೪೫

ಏನಪಾರವೊ ಸಾಗರಗಳಿವು
ತಿನ್ನುತಿವೆ ನೆಲವನ್ನು ಯುಗವೆಲ್ಲ
ಎನ್ನಿ ಕಳೆಯಲು ನೀರಿಗಾಹುತಿಯಾಗಲಿಹುದಿಹವು
ಏನವು ನದಿ ಸರೋವರಗಳವು
ಮಣ್ಣು ನೆಲವನ್ನಗೆದು ಕರಗಿಸಿ
ತಿನ್ನುತಿಹ ಭುವಿಯನ್ನು ಕೊರೆಯುತ ಚಿಕ್ಕದಾಗಿಸುವುದು
೯೪೬

ದ್ವೀಪಗಳಿಪ್ಪತ್ತು ಸಾವಿರ
ಪಾ ಪಯಾರ್ನಯ ದ್ವೀಪಗಳೊಳ್
ಪ್ರಪಂಚದ ನೆಲವದುವೊ ಬಿರುಕಿಂದೊಡೆದು ಕರಗುವುದು
ಕೊಪೆ ಕೊಲ್ಲಿಗಳಿಡೆಯೆ ನೆಲದಡಿ
ಯಿರ್ಪ ಕೆರೆಕೊಳಗಳವು ತುಂಬುತ
ನೀರ್ವರಿಯೆ ನೆಲ ಸರಧಿಯಾ ತಳವಿಂದೆನಿಸಲಿಹುದು
೯೪೭

ಭೂಮಿಯಾ ವಿಸ್ತಾರ ಮೀರುತ
ಈ ಮನುಜರಾ ಸಂಖ್ಯೆ ಹೆಚ್ಚಿರೆ
ತಾಮಸದ ತವರಾಗುತಿಹುದೀ ನೆಲ ಪಾಪಸನ್ಯದತಿ
ಪ್ರೇಮ ನೇಮಕೆ ಸ್ಥಾನವಿಲ್ಲದೆ
ಧರ್ಮದಯೆಗೆ ಅಭಾವವಾಗಿರೆ
ಭೂಮಿಯಿದು ರಣರಂಗ ಹತ್ಯಾ ಶೃಂಗವೆನಿಸಿಹುದು
೯೪೮

ನೆರೆ ಪ್ರಳಯ ಭೂಕಂಪದೊಡೆಯೊ
ಬಿರುಸು ಗಾಳಿಯು ಸಿಡಿಲು ಬಡಿತದೆ
ಗಿರಿದರಿಯು ಕೆಡೆದೊಡೆದು ಜಾರುತ ಕೆರೆಯೆ ಹೊಲಬಯಲು
ಧರೆಯು ಈ ತಳದೇರು ತಗ್ಗುವೊ
ಬರದ ಉಕ್ಕಲು ಜೀವಿನಾಶವು
ಪುರವು ನಾಶವು ಸರ್ವನಾಶವು ಎಂಬವೊಲುವಹುದು
೯೪೯

ಇದೆಯೆ ಗ್ರಹಗಳು ತಾರೆ ಚಂದ್ರರ
ಅದೆಯೆ ಭೂಕಂಪಾದಿಗಳು ಈ
ವಿಧದಲಿವೆಯೋ ನೆರೆಪ್ರಳಯ ಮಳೆಗಾಳಿಯವು ಅಲ್ಲಿ?
ಇದೆಯೆ ಸಾವಿರ ಲೋಕಗಳಲೀ
ವಿಧದ ಜೀವಿಗಳಲ್ಲಿ ಬಗೆಬಗೆ
ವಿಧಿತ ಕ್ರಮನಿಯಮಾದಿಗಳು ಬಹುಪರಿಯ ವ್ಯಾಧಿಗಳು?
೯೫೦

ಇದೆಯೆ ಚಲಿಸುತಿರುತಿರುವ ಹಕ್ಕಿಯು
ಮುದದ ಲೋಕದಾಡುತಿಹ ಚಿಗರಿಯು
ವಿಧ ವಿಧದ ಹೂವುಗಳು ತರುಲತೆಗಳುವು ಪುಷ್ಪಲವು?
ಇದೆಯೆ ಸಹಸ್ರ ಲೋಕಗಳಲಿ
ಬದುಕುಗಳು ಕೋಟ್ಯಾದಿ ಈ ಬಗೆ?
ಬಿದಿತ ಕರ್ಮವದೇನೆನಿಸುತ ಹೇಳ್ವವರು ಎಲ್ಲಿಹರೆ?
೯೫೧
ಮಂದಗಾಮಿನಿಯು ರೋಲು ಹರಿಯುವ
ಸಿಂಧು ಗಂಗೆಯು ರಲ್ಲಿಹರೆ? ಸುರ
ಸುಂದರವೋ ನೈಸರ್ಗಿಕಾ ದೃಶ್ಯಗಳು ಎಲ್ಲಿವೆಯೆ?
ಚಂದ್ರ ತಾರಾವಳಿಯು ಲೋಕಗ
ಳೆಂದವೇನ್ ಬರಿ ಕಲ್ಲೆದ್ದುಳು ನೆಲ
ವೆಂದು ನೆನೆಯುತ ನಿಂದು ನೋಡಿದೆ ಭೂಮಿಯು ಭವ್ಯತೆಯು
೯೫೨
ನೀಲ ಆಗಸದಾಗೆ ಹಾರುವ
ಬೆಳ್ಳನಿಹ ವರಗರುಡರೋಲು ಕೇ
ಳ್ಳಿಹುದಾ ವಿಮಾನವವು ಕಲಿಯುಗದ ಪುಷ್ಪಕವು
ತೇಲುವವು ಕಾರ್ಮುಗಿಲ ಮರೆಯಲಿ
ಸಲ ಆತ್ಮವಾಸ್ವರರ ಲೋಕದಿ
ತಲ್ಲಣಿಸದೆಯೆ ಒಯ್ಯುತಿಹುದೈನೂರು ಜನಗಳನು
೯೫೩
ಇಹುವೇ ಪರಲೋಕಗಳಲಿತರ
ವಾಹನಗಳುವು ಬಸಿಸ್ಸು ಕಾರುಗ
ಳಿಹುವೆ ದೂರದ ಜಯಸಿಯಿಹ ವೈಜ್ಞಾನಿಕರು ಇಹರೆ?
ಸಾಹಸದ ದಿನ ನಿತ್ಯ ತೋರುವ
ದಾಹಕದೊ ಕೊನೆಯಿಲ್ಲವೆಂಬಿಹ
ಮಹತ್ಸಾಧಕರೀ ತೆರನೆ ಪರಲೋಕದಲಿ ಇಹರೆ?
೯೫೪
ನೂರು ನೂರೈನೂರು ಎಂಬೋಲು
ಧಾರಿಣಿಯು ಜನ ಗಗನದೆತ್ತರ
ಹಾರುತಿಹರಾ ಅನುದಿನವು ಜಗದುದ್ದಗಲದಲ್ಲಿ
ಸಾರುವರು ನೂರಾರು ಜಹಜುಗ
ಳೇರಿ ತುಂಬುತ ಸಾಗರದಿ ಸಹ
ಸಾರು ಜನ ತೇಲ್ಗುತಲು ಉದ್ದಕು ತೇಲುತಲಿ ಇಹರು
೯೫೫

ಜೀವಿಗಳೆಲ್ಲರ ಜ್ಞಾನ ಮಾನದಿ
ಹಾವ ಭಾವ ವಿಚಾರ ಯೋಗದಿ
ಪಾವನವು ಪರಮೋತ್ತಮವಾಗಿಹ ಜನ್ಮವಿದು ಪ್ರೋತ್ತು
ಭೂವಲಯದೊಳು ಜನಿಸುತಲಿ ವಾ
ಸವ್ಯವನು ಬೆಳಗಿಹನೊ ಮಾನವ
ನೀವಿಕಸಿತೆಯನು ಯಾಂತ್ರಿಕವಾಗಿಸುತಿಹನೊ ನಿಜದಿ
೯೫೬
ಆನಿತಿರಲು ಜಗದಲ್ಲಿ ಕೇಳುತನು
ಮನವ ಬಿಗಿದಾಗಿಸುವ ಜನ ಜೀ
ವನಕೆ ಒಪ್ಪುವ ಒಪ್ಪದಿಹ ಸುಖ ದುಃಖಗಳು ಇರವೋ
ಜನನ ಮರಣಾಂತ್ಯ ನೋವು ಬೇವುಗ
ಳಿನಿತು ದ್ವಂದ್ವಗಳಿಂದ ಜೀವಿಗ
ಳನ್ನು ಬಿಡಿಸದೊಡೆ ಜಗವನು ಸ್ವರ್ಗ ಸಮವಿರದೆ?
೯೫೭
ಲೋಕವಿದು ವಾ ಖಂಡಗಳನುರಿದ
ನಾಕ ನರಕವಿದೆನ್ನುತಲಿಯಂದೆ
ಬೇಕು ಬೇಡದ ಕಾರ್ಯದಲಿ ನಿರತರಿರೆ ಜೀವಿಗಳು
ದುಃಖ ಸುಖಗಳು ಬಳಿಯಲುರುಳುತ
ಸೊಕ್ಕಿ ತಾವ್ ತಮ್ಮತ್ತೆ ದೈವವ
ಧಿಕ್ಕರಿಸುತಲಿ ಕಲ್ಪಿಸಿಹರಾ ಭೇದಗಳನು ಹಲವಾ
೯೫೮
ಇನಿತಿಹ ಭುವಿಯಲ್ಲಿ ಕಾಣ್ವುದು
ಕನಸಿಗೆ ನೆನಸಿಗೆ ವಿಂಚೊಳಗೆ ದು
ಗುಣಗಳು ಹಿಂಸೆಯು ದುರಾಚಾರಗಳು ಕಣ್ಣದೆರೆಯೊಡೆಯು
ಮನುಜನ ಮನೋತ್ಕೃಷ್ಟ ಜ್ಞಾನವ
ನಿಗ್ರಹಿಸಿ ಸಿದ್ಧತೆ ಶಾಂತಿ ಬಯಸುಯು
ಪತ್ರ್ಯ ಪಾಪಿಗಳಿಗೆ ತೆರೆಯಲು ಹಿಡಿಗೂಡಿ ವರಿಯುತಿವೆ
೯೫೯
ಸಿದ್ಧತೆವರದನ್ನಿ ಸಹಸ್ರ ಹಾರಿಯು
ಶೀಳ್ದೊಡದೀನ್ ನಿಜವದಾಗದು
ಜಿಜ್ಞಾಸೆಯಿದ ಬೇಯಿಸಿದೊಡದು ವಾ ರಸ್ಸವಾಗದೊಲು
ಕಲ್ಲುತನದೊಡ ಗೊಂಡು ಸಾವಿರ
ಕತ್ತಿಲ್ಲ ಕಾವಿಹ ಸ್ನೇಹಿ ದೋಷಿಗ
ಳಲ್ಲಿ ಬಾಳ್ಗಳಿಯುತ್ತು ನಗುನಗುತಿರಲದೇನ್ ಹಿತವೋ
೯೬೦

ಜೀವನದಲ್ಲೀ ಪ್ರಗತ್ತಿ ಬದುಕವ್ವೋ
ಜೀವನದಲ್ಲೀ ಪತನವೇ ದುರ್ಗತ್ತಿ
ಜೀವನದಲ್ಲೀ ಬದುಕಲು ನಿಷ್ಠುರ ಬಾಳು ದುರ್ಭರವೋ
ಜೀವನದಲ್ಲೀ ಸೋಲ್ಲು ಸೋಲುಗಳು
ಜೀವನದಲ್ಲೀ ಕಷ್ಟವು ಕೋಟಿಗಳು
ಜೀವನದಲ್ಲೀ ಆತ್ಮವಂಚನೆ ಮೋಸ ದ್ರೋಹಗಳು
೯೬೧

ಲೋಭ ಕೊಳ್ಳದ ರಾಶಿ ತುಂಬಿಸಲು
ಲೋಭದಲಿ ತಾನ್ ಕೊರಗಿ ಸಾಯುವ
ಉಬ್ಬರತೆಯಾ ರೋಗವದು ಸಾಂಕ್ರಾಮಿಕವು ಜಗದೆ
ಲಾಭ ತಂತ್ರದೆ ಲಾಭ ಮಂತ್ರದೆ
ಲಾಭ ಮೋಹದೆ ಲಾಭ ದ್ರೋಹದೆ
ಲಾಭವದರಾಜ್ಞಾನಿಯಮವೆ ಬದುಕ ಕೆಡಿಸುವುದು
೯೬೨

ಬಾಳುವಿಕೆ ಸಿದ್ಧವರ್ತ್ಯ ಪ್ರೇಮದದೆ
ಸಲ್ಲುತವಹ ಸತ್ಯ ಸಾರದೆ
ಗುಲ್ಲಿ ಗೋಡೆಗಳನ್ನು ಗಣಿಸದೆ ಕಳೆಯುವುದೆ ಸೊಬಗು
ಕಲ್ಲು ಮುಳ್ಳುಗಳನ್ನು ತುಳಿಯುತ
ಸಿಲ್ಲದಾ ದುರದೃಷ್ಟ ಸಹಿಸುತ
ಕಾಲದರಿಯುತಲಿ ಬಲುಮೆಯಿಂದ್ಯೋಸುವುದೆ ಸುಖವಿಹದೆ
೯೬೩

ದರ್ಪ ಮತ್ಸರ ಮೋಹವಪ್ತ ತಂ
ಬಿರ್ಪ ಮನವದು ಕಾಲವನೋಡದ್ವದು
ಒಳ್ಳೆ ಒಲ್ಮೆಗಳಿಲ್ಲದಿರೆ ನಾಶನ್ನೆ ಒಡೆಯುವುದು
ದರ್ಪ ಮತ್ಸರವದುವೆ ಮಾರಕ!
ಕೊಪಟ್ಯ ಕಾಮಾರ್ಥಗಳಿಲ್ಲದಿಹರವ
ರರ್ಪಿಸುವ ನಿಧಿ ರಾಗಕೆಯಲಿ ಕಣಬೊಕ್ಕಳೆ ಕರವದುವೋ
೯೬೪

ಆಶೆಗಳು ಆಕ್ರೋಶಗಳು ನಿ
ರಾಶೆಯಲಿ ಕೊನೆಗೊಳ್ಳುತಿರಲು ವಿ
ದೇಶಗಳು ಸ್ವದೇಶವೆನುತಲಿ ತಿರುಗಿ ಫಲವೇನು?
ಮೋಹ ವೈಭವ ಧನಿಷ್ಠ ಕಾಂಚಾ
ರಾಶಿ ಗೃಹಬಲ ಶ್ರಿಷ್ಟಿಯುವದು ಬ್ರಹ
ದ್ವಿಶ್ವವಿದ ನಡೆಸುತ್ತಿರಲು ಫಲವನುಭವಿಸುವಿಹದೆ?
೯೬೫

ರಾಗ ಭೋಗಗಳಿಂದು ಜೀವವ
ಸೋಗಿನಲಿ ಸವೆಸುತ್ತ ನಿತ್ಯವು
ಭಾಗ್ಯವನೆ ಬಂಡಾಟದಲಿ ಮೆರೆಸಲುಪದವೆ ನರಕಾ
ಜಾಗೃತವಹ ಲೋಕವಿದನು ಈ
ಜಾಗೃತಿಯೊಳಾ ಹೊಲಸು ಕಲಸನ
ಮಾಗಿಳವಿದಂತಾಗಿಸಿರೆ ಕೇಳದವೆ ಚಿರನರಕಾ

೯೬೬

ಕಷ್ಟ ಸುಖಗಳ ಸಹಿಸುತಲಿ ನಾಂ
ಕಷ್ಟಗಳನೊಲದಪ್ಪುತಲಿ ನಾಂ
ತುಷ್ಟನಾದೆನು ಮರೆಯುತಲಿ ಆ ವಿದಿತ ವಿಧಿಬಲಕೆ
ಮುಟ್ಟಲ್ಯಯತಲಿ ಬಗೆದಿಷ್ಟ ಭಾಗ್ಯವ
ದೊಷ್ಟ್ಯ ಎಂದೆನುತೆನುವರಾರ್ಕೆ ?
ಆ ಕೃತಬಲ ಶನಿ ರಾಹುಯೋಗವೆ ಕಾಡಿಸಿರೆ ನಿತ್ಯ

೯೬೭

ಮಾನಕಿಹ ನೆಲೆ ಉನ್ನತಿಕೆ ಬೆಳೆ
ಆಶ್ರಯಕೆ ಕೊಲ ದುಡಿಯಲಿಕೆ ಹೊಲ
ಈಸಲಿಕೆ ಭವವೆಂದೆನುತಲೀ ಜನ್ಮಗಳು ಸಾರುತಿ
ಆಶಿಸುವ ನರರಲ್ಲೋ ಸಿದ್ಧತೆ
ಗಾಸರಿಯು ಈ ಜಗದೊಳಿಂತು ವೆ
ನಾಶಕೆಳಸಿಹ ಮನುಜರಡ ಕಡೆಯುವವರೆಂದೆನ್ನುವಿರೆ ?

೯೬೮

ಮುಟ್ಟದಿಲ್ಲವು ಚಿನ್ನವಾಗಿಹ
ಕೊಟ್ಟಹರು ನೆರೆ ವೈಭವಗಳನು
ಕಟ್ಟಿಹರು ಭತ್ತಾಂತ ಸೌತ್ರ ಕಟ್ಟೋಣಗಳ ಸಾಲುಗಳು
ಬಿಟ್ಟು ಸಾಧಿಸದೇನು ಧರ್ಮಕೆ ?
ಬಿಟ್ಟಗಲುತಿರೆ ನೆರೆ ಆದೇತಕೆ ?
ಕೊಟ್ಟು ಕೊಡದೆಯೆ ಕೆಟ್ಟು ಕೆಡುವಂತಾಗುವುದು ಜೀವಾ

೯೬೯

ಗಳಿಸುತಿಹ ನಿರಿಯೊಡನೆ ಪಾಪವ
ಉಳಿಸುತಿಹ ನಿಧಿಯೊಡನೆ ದೋಷವ
ಬೆಳೆಸುತಿಹ ಗೆಳೆತನದೊಡೆಯೆ ಒಸಡಿಯೆ ವೈರವನು
ಕಳೆಯುವುದು ಕ್ಷೋಕ್ಷೋವು ಅಂತೆಯೆ
ತಳೆದ ಜನ್ಮದ ಕ್ಷೇಲವದುವೆ
ಉಳಿಸುವುದು ಮತ್ತೇನು ಮಾಹಾ ಹಿಮಾಲ್ವಯಲಿ ಜನವು?

೯೭೦

ಜನವು ಎಷ್ಟೋ ಅಷ್ಟೇ ಭೇದವು
ಗುಣವು ಪ್ರಕೃತಿಯು ಹಾವ ಭಾವವು
ಮನದ ಸೂಕ್ಷ್ಮವು ಅಂಗೈಯಾ ಗೆರೆ ಹಲ್ಲುಗಳು ಕಣ್ಣು
ಜನ ಅಸಂಖ್ಯ ರೀತಿ ವಿವಿಧವು
ತನನ ವತನನದಲಿಷ್ಟೇ ಭೇದವು —
ಗಣಿಸಿಹರೆ ವೈವಿಧ್ಯತೆಯು ಸೃಷ್ಟಿಯು ವೈಚಿತ್ರ್ಯವನಾ ?
೯೨೧

ಬುದ್ಧಿಬಲದಿಂ ಮಾನವನು ಈ
ಸಿದ್ಧಿ ಪಡೆದಿಹ ಜೀವಿಯೆನಿಸಲು
ಬದ್ಧರಾಗಿಹ ಶ್ವಾನ ಮಾರ್ಜಾಲಾಶ್ವ ಜಾತಿಗಳು
ಸದ್ದಿಸಿಗದ ಸಮುದ್ರ ಜಂತುಗ
ಳಿದ್ದರೂ ಬಹು ಪ್ರಜ್ಞತೆಯು ಗತ್ತಾ
ಮಿದ್ದ ಬುದ್ಧಿಂಬಂತೆ ತೋರುತ ಮುಗ್ಧರಾಗಿರ್ಪವೊ
೯೨೨

ನೋಡಿಹರೆ ಎಲ್ಲಿ ಖಗಗಳ ಕರುಗಳು
ನೋಡಿಸುವ ಪ್ರೀತ ತಾಯ್ಗಳಾ ಬಲ ?
ಹಾಡುತಿಹ ಖಗ ಕರುಗಳು ಕೋಗಿಲೆಯಾದಿಗಳು ಮೇಲು ?
ಬೀಡುತ ಗೂಡುಗಳೊಳು ಚಿಲಿ ಪಿ
ಪಾಡುತಿಹ ಮರಿಗಳವು ಹಾ
ರಾಡುತಿಹ ಕಲಿಗಳುದರವು ಬಹು ಸಹಸ್ರ ಪಕ್ಷಿಗಳು !
೯೨೩

ಕೂಡುವವು ಹಿಂಸರದಲನುದಿನ
ಮಾಡುವವು ಜತೆಗೂಡುವವು ಮಾ
ತಾಡುವವು ಉಣ್ಣುವವು ತಿರುಗುವುದೆಂಬುದದೆ ಜೀವಾ
ಆಡುವ ಕುರಿ ನರಿ ನಾಯಿ ಜಲಚರ
ಕಾಡುಮೃಗ ಖಗವೆಲ್ಲವೀ ಜಗ
ದಾಡು ತೋರುತ ಮಾನವರವೊಲು ಕಲಿಯುವವು ಜೀವಾ
೯೨೪

ಇನಿತಿಹಾ ಜಗದಲಿ ನಿರಂತರ
ಜನಿತಮಗಳು ಬಗೆಬಗೆಯು ಜೀವಿಗ
ಳೆನುತ ಪಡೆಪಡೆ ಜೀವಯೋಗವುದಾತ್ತ ಸಿದ್ಧಿಯದು
ದಣಿಯದೆಯೆ ತಿಮಿಲ ತಿಮಿಂಗಿಲ
ಮಿನಿಸಿ ಸಾಗರದಿದ್ದ ಹರಿಮಾ
ಹನನವೊಲು ಖಾನಾಗಿ ಹಾರಲು ಜೀವಕೋಟಿಯುವೊ
೯೨೫

ಮಾನವತ್ವವ ನೆಚ್ಚಿ ಬಾಳಿರಿ
ಬೇನೆ ಬೇಸನಗಳೊದೆಯೆ ಬಳಿದಿರಿ
ಮಾನವನ ಮದ ಮತ್ಸರಾದಿಯೆ ನಿತ್ಯ ನರಕವಿರೆ
ಜ್ಞಾನ ಧ್ಯಾನಗಳೆತ್ತ ಇಲ್ಲದ
ಹೀನತನವನೆ ಹೊಂದಿ ಮಾನವ
ಯೋನಿ ಕೋಟಿಯಲಿ ಬಿದ್ದು ಬಿದ್ದಳಿ ನಿರತರರಿ ವಿಕಾ ?

೯೨೧

ನಾಕ ನರಕವ ದೇವನರಿಯದೆ
ಮೂರ್ಖರೆಸಗುತ ಪಾಪವನು ಹಿರ
ಲೋಕಗಳು ಇವೆಯೆಂಬ ಕನಸಿನ ಭ್ರಮೆಯಲಿರುತಿಹರು
ತರ್ಕವಿಲ್ಲದ ತಪ್ಪು ಸಾವಿರ
ಅಕ್ರಮಗಳೊಂದಿಗೆ ನಿತ್ಯವೆಸಗುತ
ದಿಕ್ಕುಗಾಣದೆ ಕಲ್ಲಿದೇವನನಪ್ಪಿ ಇರುತಿಹರು

೯೨೨

ಓದು ಬರೆಹದೆ ನಿದ್ದೆ ಹಡೆಯದೆ
ಸಾಧನೆಗೆ ಪ್ರತಿಫಲವು ಇಲ್ಲದೆ
ಆದರದ ನಡೆನುಡಿಗೆ ಮನ್ನಣೆಯಂತು ಇಲ್ಲದಿರೆ
ಬಾಧಕವು ಈ ಬದುಕಿನೊಳಿನ್ನೆ ವಾ
ಗ್ವಾದಗಳು ಬರಿ ಹರಡಿಯಿನೆ ಪ್ರತಿ
ಪಾದಿಸುವ ಕ್ರಾಂತಿಕ್ರಾಂತಿಯು ವಿಕೃತಿ ಅವಿಕೃತಿಯು ಅದುವೊ

೯೨೩

ಬದುಕಲೆಂದವರತ್ತವು ಇಚ್ಚಿಸಿ
ಹದುಳದಲಿ ಕಾಲಧರ್ಮ ಪಾಲಿಸೆ
ಸವಿದಿನವದು ಬರಲೆಂದು ಮಾನದಲಿ ಹೋರಾಡುವ ರಂತು
ಒದಗುವುದು ಸ್ವಾತಂತ್ರ್ಯತನದ ಗತಿ
ಮದವು ಮತ್ಸರ ದ್ರೋಹದಾ ಹತಿ
ಯಂದಿವೆ ಭ್ರಷ್ಟಾಚಾರ ಸಮವಿಹ ನಿಷ್ಠುರದ ಇರುವೊ

೯೨೯

ಕಣ್ಣು ಕಾಲ್ಗಳ ತಪ್ಪುತಿದಹುತ
ಮಣ್ಣು ಮನೆಯನು ಬಿಟ್ಟು ಓಡುತ್ತ
ಮನ್ನು ಸಾಧಿಸಿ ಜನ ಸಮಾಜದ ಏಳಿಗೆಯನು ಬಯಸಿ
ಹೆಣ್ಣು ಮಣ್ಣಿಯನು ತುರಿಯಿಸುವವರೊಲು
ಹೆಣ್ಣು ಮಾಲಿನಯ ಬಳಗೆ ಹುಲ್ಲುಕೋಲು
ಖಿನ್ನ ಭಾವದ ಕಲ್ಪಿಸುತ ಬದಲಾಯಿಸುವರು ಕಾಲವ

೯೩೦

ಬರೆಯುತಲಿ ಶೋಷಿತಗರ ನಿಜದಲಿ
ಇತರ ಸಮಾನರು ಎಂದೆನುತ ಬಹು
ಹರಿಯುತಲಿಹ ದೊಣ್ಣೆಗಳ ವೀರರು ಶೂರರಿಂದೆನುತ
ಧರೆಯಲ್ಲಿ ಹರಿ ರಕ್ತವ ಬಹು
ತರದ ತೋರಿಯುತ ಸೃಷ್ಟಿಸುವ ಬಗ್ಗೆ
ಬರಹಗಳು ದಿಗ್ಗೆಡಿಸುವುದು ಚಿಂತಕರನ್ನು ಜಗದಿ

ನಲ೧

ಹಸಿವೆ ಕಾಸಿಗೆ ಹೊಟ್ಟೆಪಾಡಿಗೆ
ಹೆಣಗುತಿಹ ಜನ ಸಿದ್ಧಿಮಾನವ
ನೋಡದೆಯೆ ಬರೆಯುವರೆ ಸಾಹಿತಿಗಳುಯೆನುತ ಹಸಿವೆ
ನನ್ನಿ ನೀತಿಗಳನಿತ್ತು ಚದುರರು
ಗಣಿಸದೆಯೆ ಗೀರುವರು ಬಳಿದು
ಲಸ್ಪೃತಿಗಳೊಳಗಿಗಳ ರಾಶಿಯ ನೊಟ್ಟುವರೋ ನಿತ್ಯ

ನಲ೨

ಇನಿತಿಹಾ ಧರೆಯಲ್ಲಿ ಧರ್ಮಕೆ
ಗುಣಕೆ ನ್ಯಾಯಕೆ ಸ್ಥಾನವಿದೆಯೆ?
ಜನಮತದಡಿ ತಾರತಮ್ಯ ವಿವೇಚನೆ ಸಮದರ್ಶನವಿಹುದೆ?
ಧನಬಲದೆ ಪಡೆಯುತಿಹ ಖ್ಯಾತಿಯು
ಧನಕನಕದೊಡೆ ಪ್ರಭುತ್ವ ಮನಿಹುದು
ದಿನದೊಡಹತವ ನೀಸಿಗೆ ಕಟ್ಟುವ ಬದುಕು ವಿನಾಶವೋ?

ನಲ೩

ರಾಜ್ಯಗಳನಾಳುವರು ಹಲವರು
ಸಾಮ್ರಾಜ್ಯಶೀಲರು ಬೀದಿ ವಸ್ತ್ರ ನಿ
ಮಾಜದಲಿ ಮೊಳಗಿಸುವ ಚಾವಟಿಯ ನಿತ್ಯ ವಂಚಕರು
ತ್ಯಾಜ್ಯವಾ ಸಿದ್ಧಾಂತಗಳವರಿಗೆ
ಆರ್ಜಿಸುವರು ಹಲ ಪಾಪದಾ ಬುತ್ತಿ
ಪೂಜ್ಯರೆನಿಸುವರು ದೀನ ದಲಿತರಿಂದಿಹದಿ ಚೋದ್ಯವಿದ್ದೆ

ನಲ೪

ಬದುಕಿನಾ ತೆರ ನಿತ್ಯ ತಳಮಳ
ಮದವೆ ಮಾನಸ ಚಿಂತೆ ಚಂಚಲ
ಮಿದಿಯು ಸಹಿಸುವ ತಳಮಳದಿ ಸಾಗುವವು ಜೀವಿಗಳು
ನದಿಗಳಾ ನೀರ್ ರಭಸ ರಭಸನೆ ಮತ್ತೆ
ಹರಿಯು ಬದಿಯೊಡೆ ಬಳಸಿಲಾ ತೊರೆ
ಯಾದುವೋ ನೆರೆ ನೊರೆ ಬಯಲಲದು ಹರಿಯುವೊಲು ಬಾಳ್ವರಿಯು

ನಲ೫

ಕಾನನದ ಆಲಿದಾಡಿ ಸತ್ತಿತ್ತಲು
ಹಣ್ಣು ಹಂಪಲುಗಳನು ಕೊಯ್ಯುತ್ತ
ತಿನ್ನುತಿಂಬಾ ಕಾತರತೆಯೊಳ್ ಬದುಕಿನಾ ಚಿಂತೆ
ವನ್ಯ ಜೀವಿಗಳಾ ಭಯಗಳೊಡೆ
ದಿನವು ತಪ್ಪನೆ ಮಳೆಳ್ತ ಹೊದರಲಗ
ಇನ್ನು ಎಡೆಹುಡುಕಿ ಪರ್ಣಕುಟೀರದ ಪೋಲದೆ ಬದುಕಲು
೯೮೬
ಕಟ್ಟು ಕತೆಗಳು ಸಾವಿರವು ಇರೆ
ಕೆಟ್ಟ ಗತಿಗಳನಟ್ಟಿ ಸುಲಭವೆ?
ನಷ್ಟಕಷ್ಟಗಳಾ ಭಾವಿ ಬೀಳುತಂತ ಸಾಯುತವವನನ್ನು
ತಟ್ಟಿ ಮುಟ್ಟುತ ತಿಡಿವುದೆಂತು
ಕಟ್ಟು ಆಗಲಲು ನಿಲುವುದೆಂತು —
ಪುಟ್ಟ ಹುತ್ತಿಯಲಿ ಹುಟ್ಟುಗತ್ತಾವನು ಬಿಟ್ಟವರು ಇಹರೆ?
೯೮೭
ಹೊಣ್ಣುಗತ್ತಾ ವರನ ಚದುರತೆಯಲಿವಾ
ಹೆಣ್ಣುಗಳೆಲವು ಸವಿತನವನೆಯೊಳ್
ಕಣ್ಣು ಕೋರಿಕೆಗೆ ಒಪ್ಪ ವೊಲಿಯುಹರೊ ಹಿತ ಗಂಡುಗಳು;
ಹೆಣ್ಣು ಗಂಡುಗಳೆರಡು ಜಾತಿಗ
ಇನ್ನುಳಿಸದಾ ದೇವನನು ಮಿ
ರಿನ್ನು ವತ್ತಕೆ ಸಹಸ್ರ ದೇವರು ಕೀಳೆಲ್ಲೆ ಮನುಜಾ
೯೮೮
ಜಾತಿ ಮತಗಳ್ ಸಹಸ್ರ ನಿರ್ಮಿಸಿ
ಕ್ಷಾತ್ರಿಮಾಗವಹ ಸಂಘರ್ಷದಾಯಕಗ
ಕೀರ್ತಿ ಕತ್ತಿಯೊ ಮಾನವನೆ ನೀನ್ ಬಿಡದೆಯಲೆ ಜನವು?
ಖ್ಯಾತ ಮತನವನು ಮೂರ್ಖನಾಗಿಸಿ
ಸ್ವಾರ್ಥವನು ಮತಾಂಧತೆಗಳಿಸಿ
ಎತ್ತಿ ಕಟ್ಟುಹ ಜನವ ಜನಕೆದರಾಗಿ ಲೋಕದಲಿ
೯೮೯
ಕತ್ತಿ ಕೋವಿಗಳಾದಿ ಅಸ್ತ್ರಗ
ಳೆತ್ತಿ ಜನ ಹತ್ತಿ ಕತ್ತಿವರಿದಾ
ಜಾತಿ ಜಾತಿಗೆ ಕತ್ತಿ ಕಾಳಗ ನಿತ್ಯ ನಡೆಯುತಿರೆ
ಜಾತಿಯಾರತಿ ಬಳಹಕ್ಕೆ ಬೇದವು
ಭೀತ ಕತ್ತೆಗೀಡಾಗಿ ಸಿಕ್ಕಿದೆ
ತತ್ತರಿಸಿತತಿಹರಲ್ಲೊ ರಕ್ತದ ದಾಹದಲಿ ಜನವು
೯೯೦

ಹಿಂದುಗಳಲ್ಲಿರ್ದ ಸ್ವಾತಂತ್ರ್ಯ ಭಾವದ
ದೊಂದು ಜಾತಿಗಳಾಗಿ ಬೆಳೆದುವು
ನಂದವೋ ಈ ರಾಷ್ಟ್ರವನು ಹೋಳಾಗಿಸುತಿದೆಲ್ಲಾ
ಯಿಂದಿನಾ ಬಲ ಕಲಹ ವ್ಯಾಧಿಯು
ಇಂದು ಇರೆ ಮತಹೃದಿರು ಕ್ರೈಸ್ತರು
ಹಿಂದು ಬೌದ್ಧ ಯಹೂದ್ಯರಿಸಲಾಂ ಭೇದಮತಕವೊ
೯೯೧

ಏತರದ ಪ್ರಪಂಚವೇನಾ
ಸ್ವತಂತ್ರ್ಯದಾಯಿಂ ಬೆಳೆದ ವಿಷಾಗ್ನಿಯು
ಪ್ರೋತ್ತೇಜಿಸುವಾ ರಾಷ್ಟ್ರಗಳೊಳುತ್ತಿತ್ತೆ ಎಂಬಂತೆ
ಉತ್ತೇಜಿಸುವಾ ರಾಷ್ಟ್ರಗಳ ಪ್ರ
ಭುತ್ವವನ್ನು ಜನವನ್ನು ಜೀವ
ಸ್ವಾತಂತ್ರ್ಯಲಾಗಿಸಿ ಇಹುದು ಕ್ಷಾಮದ ಬೇನೆ ಬಡತನದ
೯೯೨

ಶಾಂತಿಯಿಂದಿನ ವರದೊ ಲೋಕಕೆ
ದಿಂತು ಶಾಂತಿಯು ಮನದಲ್ಲೀ ತಾನ್
ಶಾಂತ ಚಿತ್ತವ ಪೊಂದದಿರೆ ಜಗದಲ್ಲಿ ಶಾಂತಿಯಹುದು ?
ತಾಂತ್ರಿಕಾವಹವೀ ಮನದಂತೆ ಕಾಣೆ
ತಂತ್ರ ಕುಹಕವು ತುಂಬಿರಲು ಕೇಳ್
ಶಾಂತಿ ಲೋಕಕೆ ಎಂದೊಡದು ಬರಿ ಗಲ್ಲವೆಂಬಂತೆ
೯೯೩

ಆಳರಸರೊಲು ಪ್ರಜಾಪ್ರಭುಗಳು
ಕಾಳಗವ ನಿಶ್ಚಿತ್ತ ಲೋಕವ
ನಾಳುತಿಹರು ಸ್ವಸ್ತ್ರಾರಿಗಳಿನಿಸಿ ಏತಕವೊ
ಕಾಲವಿದು ದೂರವ ಜಯಿಸಿ ಭೂ
ಗೋಲವನು ಕಿರಿದಾಗಿಸಿರಲಾ
ಗೋಳುವುಣಿಸುವ ರಾಷ್ಟ್ರಗಳು ಬಲಮತಗಳಿನ್ನೇಕೆ?
೯೯೪

ಕಟ್ಟಿರಲಿ ಕೇಳ್ ಲೋಕರಾಜ್ಯವ
ಬಿಟ್ಟು ಪಿಳ್ಳತನ ಮಾತ್ಸರ್ಯವಾದವ
ಅಟ್ಟುತಲಿ ಮತ ಜಾತಿವಾದದ ದುಷ್ಟನೀತಿಗಳು
ದಿಟ್ಟವಹ ಮಾರ್ಗದ ತೋಷವ
ದೊಟ್ಟು ಊರಿಗೆ ನೆರಳನೀವೊಲು
ನೆಟ್ಟು ಬೆಳೆಸಿರೊ ವಿಶ್ವರಾಜ್ಯದ ವೃಕ್ಷವದನಿಂದೆ
೯೯೫

ಬಾಂದಳದಿ ಸಂಗ್ರಹಿತ ಮುಗಿಲಿನ
ಸಾಂದ್ರತೆಯು ನೋಡುತ್ತ ಮರೆಸವಿ
ಮಂದ್ರ ವಾಗ್ಝರಿಯೊಡೆಯು "ಮೇಘ ಸಂದೇಶ"ವನಿತ್ತಿಹ
ಅಂದದಾ ನುಡಿಹನಿಗಳಂದು ಆ
ಸಿಂಧ್ಯವಿಹ ಪ್ರಕೃತಿಯು ತೋಯುವುದು
ಚಂದ್ರ ತಾರಾಲೋಕಗಳೆ ನಿಸ್ಪಷ್ಟವಾಯಿತವೊ
೯೯೬
ಚೆಲುವು ಹೊಲವುಗಳಿಲ್ಲದಿರ ಬಲ
ಗಳಿಸುವಾ ಗೆಲುವುಗಳು ವ್ಯರ್ಥವು
ಬಲಿಸುವಾ ಸಂಖ್ಯಾತ ಜೀವಿಗಳುದರ ನಿಮಿರಿಸುವ
ನೆಲೆಸಿಹವು ಮನದಲ್ಲಿ ನಿತ್ಯವು
ಇಳೆಯು ನೊಂದರೆ ಕಟ್ಟುತಿಹ ತೆರ
ಗಳಿತವೊ ಮಾನವ ಮನದಾಳದೆ ಮನವಮಿವೆ ಮೋಕ್ಷವದು
೯೯೭
ಜನದ ಶಕ್ತಿಯು ಸ್ಫೂರ್ತಿಯಲಿ ಇಹ
ದಿನದ ಲೋಕದ ಕ್ಷೇಮವದು ಬರೆ
ಮನದಲಿಹುದೀ ಜನದ ಜಂತುಗಳಿಲ್ಲದರ ಜೀವಾ
ಜನವ ಉಳಿಸಲು ಬೇಕು ಸಸ್ಯಗ
ಳನುವೊ ರಕ್ಷಿಸಬೇಕು ಪ್ರಕೃತಿ
ಯನ್ನು ನೆಲ ಜಲ ನಭಚರಾದಿಗಳನ್ನು ಒಲ್ಮೆಯಲಿ
೯೯೮
ಹರಿಯುತಿಹ ಕಾವೇರಿ ಕೊಡಗಿ
ಸಾರುತಿಹ ನೆಲೆಬೆಲೆಯನರಸುತ
ಸಾರತರ ಸುಖ ಶಾಂತಿ ಪೊಂದಲದೇನು ಬಗೆಯೆನುತ
ಆರ್ಕೆನಿದಿಹ ವಿಶ್ವಮಾಯೆಯು
ಸೂರೆಗೊಂಡಿಹುದಿಹದ ಸುಮನವು
ತೋರಲಿತ್ತೆ ಶ್ರದ್ಧೆಯೊಳು ಮಂಗಳ ಲೋಕದಾ ನೆಲೆಗೆ
೯೯೯
ಮಂಗಳವು ಸೃಷ್ಟಿಯಲಿ ಸಾವಿರ
ಮಂಗಳವು ಕವಿವಾಣಿ ಸುಮಧುರ
ಮಂಗಳವೊ ಶ್ರೀ ಸರಸ್ವತಿಯ ಸರಸಕ್ಕೆ ವಾಗ್ವಿಲಕೆ
ಮಂಗಳವು ಸಿರಿಯೋಗ ಭಾಗ್ಯಕೆ
ತುಂಗ ಲೋಕದ ಸಂಚು ಭಾತಕೆ
ಶೃಂಗರಿತ ಸಿರಿ ಶಕ್ತಿ ಭೂಷಣೆ ಭುವಿಗೆ ಮಂಗಳವೊ!
೧೦೦೦
(ಹತ್ತನೇ ಶತಕವು ಸಂಪೂರ್ಣವು)

348

ಲೋಕ ದರ್ಶನ

ಭಾಗ ೧.

ಮೊದಲ ೧೦೦೦ ಪದ್ಯಗಳು.

ಪಿ. ಮಾ. ಮಿತ್ರಸ್ಹೊ.

Vancouver.
Canada
1986